# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಶನಿವಾರ, ಜನವರಿ 09, 2021

ಸಂಪುಟ : 47 ಸಂಚಿಕೆ : 250 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಸೋಮವಾರ ರಾಜ್ಯದಲ್ಲಿ ಲಸಿಕೆ


## ಪೂರ್ವನಿಗದಿತ ವ್ಯಕ್ತಿಗಳಿಗೆ ಲಸಿಕೆ ನೀಡಲು ಜಿಲ್ಲಾಡಳಿಗಳಿಗೆ ಸೂಚನೆ

ಬೆಂಗಳೂರು, ಜ. 8 - ಕೊರೊನಾ ಸಾಂಕ್ರಾಮಿಕ ನಿಯಂತ್ರಣಕ್ಕೆ ಬರುವ ಸೋಮವಾರದಿಂದ ಸಾರ್ವಜನಿಕರಿಗೆ ಲಸಿಕೆ ನೀಡಿಕೆ ಆರಂಭಗೊಳ್ಳಲಿದೆ.

ಪುಣೆಯಿಂದ ವಿಶೇಷ ವಿಮಾನದಲ್ಲಿ ಬೆಂಗಳೂರು, ಕಲಬುರಗಿ ಸೇರಿದಂತೆ ಐದು ಕೇಂದ್ರಗಳಿಗೆ ನೇರವಾಗಿ ಲಸಿಕೆ ತಲುಪಲಿದೆ. ಕೇಂದ್ರ ಸ್ಥಾನದಿಂದ ಉಳಿದ ವಿಭಾಗಾವಾರು ಮತ್ತು ಜಿಲ್ಲಾ ಕೇಂದ್ರಗಳಿಗೂ ನಿಗದಿತ ಪ್ರಮಾಣದಲ್ಲಿ ಲಸಿಕೆ ವಿತರಣೆಯಾಗಲಿದೆ.

ಮೊದಲ ಹಂತದಲ್ಲಿ ಬರುವ ಲಸಿಕೆಯನ್ನು ಪೂರ್ವನಿಗದಿತ ವ್ಯಕ್ತಿಗಳಿಗೆ ನೀಡಬೇಕೆಂದು ರಾಜ್ಯ ಸರ್ಕಾರ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ.

ಸರ್ಕಾರದ ಆದೇಶದಂತೆ ಜಿಲ್ಲಾಡಳಿತ ಮೂರು ಹಂತದ ಪಟ್ಟಿ ಸಿದ್ಧಪಡಿಸಿಕೊಂಡಿದ್ದು, ಮೊದಲ ಹಂತದಲ್ಲಿ ವೈದ್ಯರು, ಆರೋಗ್ಯ ಸಿಬ್ಬಂದಿ ಹಾಗೂ ಪತ್ರಕರ್ತರಿಗೆ ಲಸಿಕೆ ನೀಡಲಾಗುತ್ತದೆ. ಎರಡನೇ ಹಂತದಲ್ಲಿ ಪೊಲೀಸರು, ಸಾರ್ವಜನಿಕ ಬದುಕಿನಲ್ಲಿ ಸಕ್ರಿಯವಾಗಿರುವವರಿಗೆ ಮತ್ತು ವಿವಿಧ ಕಾಯಿಲೆಗಳಿಂದ ತೀವ್ರವಾಗಿ ಬಳಲುತ್ತಿರುವವರಿಗೆ ನೀಡಲಾಗುವುದು. (2ನೇ ಪುಟಕ್ಕೆ)



ಜಿಲ್ಲೆಯ ಆರು ಕೇಂದ್ರಗಳಲ್ಲಿ ನಡೆದ ಲಸಿಕೆಯ ತಾಲೀಮು

### ಕೊರೊನಾ ವಾರ್‌ನಿಂದ ವ್ಯಾಕ್ಸಿನ್ ವಾರ್ ಕಡೆಗೆ

ದಾವಣಗೆರೆ, ಜ. 8 - 2020 ವರ್ಷವಿಡೀ ಕೊರೊನಾ ವಿರುದ್ಧ ಸಮರ ಸಾರಿದ ನಂತರ, 2021ರಲ್ಲಿ ಕೊರೊನಾ ಲಸಿಕೆ ನೀಡುವ ಬೃಹತ್ ಸಿದ್ಧತೆ ಆರಂಭವಾಗಿದೆ. ಅದರ ಅಂಗವಾಗಿ ಜಿಲ್ಲೆಯ ಆರು ಕಡೆಗಳಲ್ಲಿ ಕೊರೊನಾ ಲಸಿಕೆ ನೀಡುವ ತಾಲೀಮು ಆರಂಭವಾಗಿದೆ.

ನಗರದ ಭಾಷಾನಗರದಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಶುಕ್ರವಾರ ಲಸಿಕೆಯ ತಾಲೀಮಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ (4ನೇ ಪುಟಕ್ಕೆ)

# ಎಂಟನೇ ಸುತ್ತಲ್ಲೂ ವಿಫಲ

## ಮುಂದುವರಿದ ಕೇಂದ್ರ-ರೈತರ ಹಗ್ಗಜಗ್ಗಾಟ

**ಪರ್ಯಾಯ ತಿಳಿಸಿ, ದೇಶದ ಹಿತ ಪರಿಗಣಿಸಿ ಎಂದ ಕೇಂದ್ರ, ಕಾನೂನು ವಾಪಸ್ ಪಡೆದ ನಂತರವೇ ಮನೆಗೆ ತೆರಳುತ್ತೇವೆ ಎಂದ ರೈತರು**

ನವದೆಹಲಿ, ಜ. 8 – ಕೇಂದ್ರ ಸರ್ಕಾರ ಹಾಗೂ ಪ್ರತಿಭಟನಾ ನಿರತ ರೈತರ ನಡುವಿನ ಎಂಟನೇ ಸುತ್ತಿನ ಮಾತುಕತೆ ವಿಫಲವಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವುದಕ್ಕೆ ಇರುವ ಪರ್ಯಾಯ ಏನು ಎಂಬುದನ್ನು ರೈತ ಮುಖಂಡರು ತಿಳಿಸಿಲ್ಲ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ಎರಡು ಗಂಟೆಗೂ ಹೆಚ್ಚಿನ ಕಾಲ ರೈತರ ಜೊತೆ ಚರ್ಚೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವ ತೋಮರ್, ಜನವರಿ 15ರಂದು ಮುಂದಿನ ಸುತ್ತಿನ ಮಾತುಕತೆ ನಡೆಯಲಿದೆ. ಆಗ ರೈತ ಮುಖಂಡರು ಪರ್ಯಾಯಗಳೊಂದಿಗೆ ಬರುವ ನಿರೀಕ್ಷೆ ಇದೆ ಎಂದಿದ್ದಾರೆ.

ಆದರೆ, ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಸಾಧ್ಯತೆಯನ್ನು ತಳ್ಳಿ ಹಾಕಿರುವ ಅವರು, ದೇಶದ ಇತರೆ ಸಂಘಟನೆಗಳು ಸುಧಾರಣಾ ಕಾಯ್ದೆಗಳನ್ನು ಬೆಂಬಲಿಸುತ್ತಿದ್ದಾರೆ ಎಂದಿದ್ದಾರೆ.

ರೈತರ ಪ್ರತಿಭಟನೆಗಳ ಕುರಿತು ಸುಪ್ರೀಂ ಕೋರ್ಟ್ ಜನವರಿ 11ರಂದು ವಿಚಾರಣೆ ನಡೆಸಲಿದೆ. ಮೂರೂ ಕಾಯ್ದೆಗಳ ಸಿಂಧುತ್ವದ ಕುರಿತೂ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ನಂತರದಲ್ಲಿ ಮಾತುಕತೆಗೆ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಕೃಷಿ ಕಾಯ್ದೆಗಳ ಕುರಿತು ರಾಜ್ಯಗಳು ನಿರ್ಧರಿಸಲು ಸರ್ಕಾರ ಅವಕಾಶ ಮಾಡಿಕೊಡಲಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ತೋಮರ್, ರೈತ ಮುಖಂಡರು ಈ (2ನೇ ಪುಟಕ್ಕೆ)

# ಅರ್ಧದಷ್ಟು ಸೈನಿಕರು ಒತ್ತಡದಲ್ಲಿ

**ಶತ್ರುಗಳಿಗಿಂತ ಒತ್ತಡದಿಂದಲೇ ಹೆಚ್ಚು ಸಾವು**



ನವದೆಹಲಿ, ಜ. 8 – ಶತ್ರುಗಳ ದಾಳಿ ಇಲ್ಲವೇ ಉಗ್ರವಾದಿ ದಾಳಿಗಿಂತ ಒತ್ತಡಕ್ಕೆ ಸಿಲುಕಿ ಪ್ರತಿ ವರ್ಷ ಹೆಚ್ಚು ಸೈನಿಕರು ಸಾವನ್ನಪ್ಪುತ್ತಿದ್ದಾರೆ. ದೇಶದ ಅರ್ಧದಷ್ಟು ಸೈನಿಕರು ಒತ್ತಡದಲ್ಲಿರುವುದಾಗಿ ಯುನೈಟೆಡ್ ಸರ್ವೀಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಯು.ಎಸ್.ಐ.) ನಡೆಸಿದ ಸಮೀಕ್ಷೆ ತಿಳಿಸಿದೆ.

ಸೈನಿಕ ಸಿಬ್ಬಂದಿಯನ್ನು ಸುದೀರ್ಘ ಕಾಲ ಉಗ್ರವಾದ ವಿರೋಧಿ ಕಾರ್ಯಾಚರಣೆಗೆ ನೇಮಿಸುವುದರಿಂದ ಅವರ ಮೇಲೆ ಹೆಚ್ಚಿನ ಒತ್ತಡವಾಗುತ್ತಿದೆ ಎಂದು ವರದಿ ರೂಪಿಸಿರುವ ಕರ್ನಲ್ ಎ.ಕೆ. ಮೋರ್ ತಿಳಿಸಿದ್ದಾರೆ.

ಕಳೆದ ಎರಡು ದಶಕಗಳಲ್ಲಿ ಕಾರ್ಯಾಚರಣೆ ಹಾಗೂ ಕಾರ್ಯಾಚರಣೇತರ ಹೊಣೆಗಳಿಂದಾಗಿ ಸೈನಿಕರ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಭಾರತೀಯ ಸೈನ್ಯ ಪ್ರತಿ ವರ್ಷ ಶತ್ರುಗಳ ದಾಳಿ ಇಲ್ಲವೇ (4ನೇ ಪುಟಕ್ಕೆ)

## ಆರು ರಾಜ್ಯಗಳಲ್ಲಿ ಹಕ್ಕಿ ಜ್ವರ; ಕಟ್ಟೆಚ್ಚರಕ್ಕೆ ಕೇಂದ್ರದ ಸೂಚನೆ

ನವದೆಹಲಿ, ಜ. 8 – ಇದುವರೆಗೂ ಕೇರಳ, ರಾಜಸ್ಥಾನ, ಮಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಹರಿಯಾಣ ಹಾಗೂ ಗುಜರಾತ್‌ಗಳಲ್ಲಿ ಹಕ್ಕಿ ಜ್ವರ ಕಂಡು ಬಂದಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದ್ದು, ಈ ರಾಜ್ಯಗಳು ಸೋಂಕು ಹರಡುವುದನ್ನು ತಡೆಯಲು ಕಟ್ಟೆಚ್ಚರ ವಹಿಸಬೇಕು ಎಂದು ತಿಳಿಸಿದೆ.

ದೆಹಲಿಯ ಹಸ್ತಸಲ್ ಹಳ್ಳಿಯ ಪಾರ್ಕ್‌ನಲ್ಲಿ 16 ಪಕ್ಷಿಗಳು ನಿಗೂಢವಾಗಿ ಸತ್ತಿರುವುದು ಕಂಡು ಬಂದಿದೆ. ಅವುಗಳ ಮಾದರಿಯನ್ನೂ ಪರೀಕ್ಷೆಗೆ ಕಳಿಸಲಾಗಿದೆ. ಹಕ್ಕಿ ಜ್ವರ ಕಂಡು ಬರದ ರಾಜ್ಯಗಳೂ ಸಹ ಕಟ್ಟೆಚ್ಚರ ವಹಿಸಬೇಕು. ಅಸಾಮಾನ್ಯವಾಗಿ ಪಕ್ಷಿಗಳು ಸತ್ತಿರುವುದು ಕಂಡು ಬಂದರೆ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರ ತಿಳಿಸಿದೆ.

## 'ಸನಾತನ' ಅನುಭವ ಮಂಟಪ ಬಸವ ತತ್ವಗಳಿಗೆ ವಿರುದ್ಧ



ಬೆಂಗಳೂರು, ಜ. 8 – ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬಸವಕಲ್ಯಾಣದಲ್ಲಿ ನಿರ್ಮಿಸಲು ಹೊರಟಿರುವ ನೂತನ ಅನುಭವ ಮಂಟಪ ಬಸವ ತತ್ವಗಳಿಗೆ ವಿರುದ್ಧವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಈ ವಿಚಾರವಾಗಿ ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, ನಮ್ಮ ಸರ್ಕಾರ ಬಸವಣ್ಣನವರ ಚಿಂತನೆಗಳ ಮರುಸ್ಥಾಪನೆಗಾಗಿ ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ ಮಾಡಬೇಕೆಂದು ಗೊ.ರು ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿತ್ತು. ಅನುಭವ ಮಂಟಪ (4ನೇ ಪುಟಕ್ಕೆ)

## ಸ್ವಯಂ ಕ್ಷಮಾದಾನಕ್ಕೆ ಟ್ರಂಪ್ ಚರ್ಚೆ



ವಾಷಿಂಗ್ಟನ್, ಜ. 8 – ಬರುವ ಜನವರಿ 20ರಂದು ಅಧಿಕಾರ ತೊರೆಯುವುದರೊಳಗೆ ತಮಗೆ ತಾವೇ ಕ್ಷಮಾದಾನ ಮಾಡಿಕೊಳ್ಳುವ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ನಿಕಟವರ್ತಿಗಳ ಜೊತೆ ಚರ್ಚಿಸಿದ್ದಾರೆ ಎಂದು ಮಾಧ್ಯಮಗಳ ವರದಿಗಳು ತಿಳಿಸಿವೆ.

ಇತ್ತೀಚಿನ ವಾರಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆದಿವೆ. ಸ್ವಯಂ ಕ್ಷಮಾದಾನ ನೀಡುವುದರ ಕಾನೂನು ಹಾಗೂ ರಾಜಕೀಯ ಪರಿಣಾಮಗಳ ಬಗ್ಗೆ ಟ್ರಂಪ್ ಚರ್ಚಿಸಿದ್ದಾರೆ ಎಂದು ಸಿ.ಎನ್.ಎನ್. ವರದಿ ಮಾಡಿದೆ.

ಟ್ರಂಪ್ ಬೆಂಬಲಿಸುವ ಸಾವಿರಾರು ಜನರು ಅಮೆರಿಕದ ಅಧಿಕಾರ ಕೇಂದ್ರವಾದ ಕ್ಯಾಪಿಟಲ್ ಕಟ್ಟಡಕ್ಕೆ ಬುಧವಾರ ನುಗ್ಗಿದ್ದು ಡೆಮಾಕ್ರಾಟ್ ಹಾಗೂ ರಿಪಬ್ಲಿಕನ್ ಜನಪ್ರತಿನಿಧಿಗಳಲ್ಲಿ ತೀವ್ರ ಅಸಮಾಧಾನ ತಂದಿದೆ. ಟ್ರಂಪ್ ಉಚ್ಚಾಟಿಸುವ ಬೇಡಿಕೆಗಳೂ ಕೇಳಿ ಬರುತ್ತಿವೆ.

ಚುನಾವಣೆ ನಂತರ ಟ್ರಂಪ್ ಸ್ವಯಂ ಕ್ಷಮಾದಾನ ಹಾಗೂ ಇದರಿಂದ ಆಗುವ ಕಾನೂನು ಮತ್ತು (3ನೇ ಪುಟಕ್ಕೆ)

# ಅನಿರೀಕ್ಷಿತ ಮಳೆಗೆ ನಗರದ ಜನಜೀವನ ಅಸ್ತವ್ಯಸ್ತ



ದಾವಣಗೆರೆ, ಜ.8- ನಗರದಲ್ಲಿ ಶುಕ್ರವಾರ ಸಂಜೆ ಸುರಿದ ಅನಿರೀಕ್ಷಿತ ಮಳೆಗೆ ಜನ ಜೀವನ ಅಸ್ತವ್ಯಸ್ತವಾಯಿತು.

ಸಂಜೆ 5 ಗಂಟೆಗೆ ಧೋ ಎಂದು ಮಿಂಚು-ಗುಡುಗಿನ ಜೊತೆ ಸುಮಾರು ನಾಲ್ಕೈದು ತಾಸುಗಳಿಗೂ ಹೆಚ್ಚುಕಾಲ ಸುರಿದ ಮಳೆ, ಇದೇನು ಚಳಿಗಾಲವೋ? ಮಳೆಗಾಲವೋ? ಎಂದು ಜನತೆ ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುವಂತೆ ಮಾಡಿತು.

ಸಂಜೆ ಕಚೇರಿ ಕೆಲಸಗಳನ್ನು ಮುಗಿಸಿ ಮನೆಗೆ ಹಿಂದಿರುಗಬೇಕಾದವರು ಮಳೆಯ ರಭಸಕ್ಕೆ ಅಂಜಿ ನಿಂತಲ್ಲೇ ನಿಲ್ಲಬೇಕಾಯಿತು. ಬಿಡದೇ ಸುರಿಯುತ್ತಿದ್ದ ಮಳೆಯಲ್ಲಿಯೇ ನೆನೆಯುತ್ತಾ ಮನೆಯತ್ತ ಸಾಗಿದರು.

ಸಂಜೆ 7ರ ನಂತರ ಮಳೆ ಪ್ರಮಾಣ ತುಸು ಕಡಿಮೆಯಾದಾಗ ಒಂದೇ ಸಮನೆ ವಾಹನಗಳ ಸಂಚಾರ ಹೆಚ್ಚಾದ ಪರಿಣಾಮ ಹಲವೆಡೆ ಟ್ರಾಫಿಕ್ ಜಾಮ್ ಸಮಸ್ಯೆಗಳು ಉಂಟಾದವು.

ರೈಲ್ವೇ ಅಂಡರ್ ಬ್ರಿಡ್ಜ್‌ಗಳ ಕೆಳಗೆ ನೀರು ನಿಂತ ಪರಿಣಾಮ ಹಳೆ ನಗರಕ್ಕೆ ಹೋಗಬೇಕಾದ ಪ್ರಯಾಣಿಕರು, ಅಲ್ಲಿಂದ ಹೊಸ ನಗರಕ್ಕೆ (4ನೇ ಪುಟಕ್ಕೆ)

## ಜಾನ್ ಡಿಸ್ಟಿಲರೀಸ್‌ನಲ್ಲಿ ಭಾರೀ ಅಗ್ನಿ ದುರಂತ

**ಓರ್ವ ಸಾವು, ಮೂವರಿಗೆ ಗಾಯ**

ಹರಪನಹಳ್ಳಿ, ಜ.8 - ಮದ್ಯ ತಯಾರಿಸುವ ಫ್ಯಾಕ್ಟರಿಯಲ್ಲಿ ಭಾರೀ ಬೆಂಕಿ ಅವಘಡ ನಡೆದಿದ್ದು, ಓರ್ವ ಕಾರ್ಮಿಕ ಸಾವನ್ನಪ್ಪಿ, ಮೂವರು ತೀವ್ರವಾಗಿ ಗಾಯಗೊಂಡ ಘಟನೆ ತಾಲ್ಲೂಕಿನ ದುಗ್ಗತ್ತಿ ಬಳಿ ಇರುವ ಜಾನ್ ಡಿಸ್ಟಿಲರೀಸ್ ಪ್ರೈ. ಲಿಮಿಟೆಡ್‌ನಲ್ಲಿ ಜರುಗಿದೆ.

ರಘು (40) ತೀವ್ರವಾಗಿ ಸುಟ್ಟು ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಕಾರ್ಮಿಕ, ಮೃತನು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮದವನು.

ಚಾಮರಾಜನಗರದ ಜಯರಾಮಯ್ಯ, ಬೆಂಗಳೂರಿನ ವಿನಯಕುಮಾರ್ ಹಾಗೂ ಬಿಹಾರದ ರಾಹುಲ್ ಕುಮಾರ ತೀವ್ರವಾಗಿ ಗಾಯಗೊಂಡು (2ನೇ ಪುಟಕ್ಕೆ)

**ಕೊಡವರು ದನದ ಮಾಂಸ ತಿನ್ನುತ್ತಾರೆ ಎಂದ**

## ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಎಫ್.ಐ.ಆರ್.

ಕೊಡಗು, ಜ. 8 - ಕೊಡವರು ದನದ ಮಾಂಸ ತಿನ್ನುತ್ತಾರೆ ಎಂದು ಹೇಳಿಕೆ ನೀಡಿದ್ದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

ಮಡಿಕೇರಿ ತಾಲ್ಲೂಕು ಮುಕ್ಕೋಡ್ಲಿನ ನಿವಾಸಿಯೂ ಆಗಿರುವ ಪಶ್ಚಿಮ ಘಟ್ಟಗಳ ಕಾರ್ಯಪಡೆ ಅಧ್ಯಕ್ಷ ರವಿ ಕುಶಾಲಪ್ಪ ಅವರು ಮೈಸೂರಿನಲ್ಲಿ ಸಿದ್ದರಾಮಯ್ಯ ನೀಡಿದ ಹೇಳಿಕೆ ಬಗ್ಗೆ ಮಡಿಕೇರಿ (2ನೇ ಪುಟಕ್ಕೆ)


# 1.6 ಲಕ್ಷ ಕಾಲೇಜು ವಿದ್ಯಾರ್ಥಿಗಳಿಗೆ ಟ್ಯಾಬ್

## ಸಂಕ್ರಾಂತಿ ನಂತರ ಪ್ರಥಮ, ದ್ವಿತೀಯ ಪದವಿ ವಿದ್ಯಾರ್ಥಿಗಳಿಗೆ ಆಫ್‌ಲೈನ್ ತರಗತಿ

ಬೆಂಗಳೂರು, ಜ. 8 - ಈಗಾಗಲೇ ಪದವಿ, ಸ್ನಾತಕೋತ್ತರ, ಡಿಪ್ಲೋಮಾ ಮತ್ತು ಎಂಜಿನಿಯರಿಂಗ್ ತರಗತಿಗಳ ಅಂತಿಮ ವರ್ಷದ ಸೆಮಿಸ್ಟರ್‌ನ ಆಫ್‌ಲೈನ್ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿರುವ ಬೆನ್ನಲ್ಲೇ ಇದೇ ತರಗತಿಗಳ ಪ್ರಥಮ-ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಆಫ್‌ಲೈನ್ ತರಗತಿಗಳನ್ನು ಸಂಕ್ರಾಂತಿ ಹಬ್ಬದ ನಂತರ ಆರಂಭಿಸಲಾಗುತ್ತಿದೆ.

ಈ ಸಂಬಂಧ ವರದಿ ನೀಡುವಂತೆ ಕುಲಪತಿಗಳಿಗೆ ಸೂಚಿಸಿರುವುದಾಗಿ ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಕಟಿಸಿದ್ದಾರೆ.

ಸರ್ಕಾರಿ ಪದವಿ, ಇಂಜಿನಿಯರಿಂಗ್ ಮತ್ತು



ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 1.6 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್‌ಲೆಟ್ ಪಿಸಿಗಳನ್ನು ನೀಡುವ ಮಹತ್ವದ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಡಿಜಿಟಲ್ ಯುಗದಲ್ಲಿ ಮಕ್ಕಳ ಸಮಗ್ರ ಕಲಿಕೆ ಹಾಗೂ ಖಾಸಗಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ನಡುವಿನ ಡಿಜಿಟಲ್ ಅಂತರ ತೊಡೆದು ಹಾಕಲು ಉಚಿತ ಟ್ಯಾಬ್‌ಲೆಟ್‌ಗಳನ್ನು ನೀಡಲಾಗುತ್ತಿದೆ.

ಇದಕ್ಕಾಗಿ ರಾಜ್ಯ ಸರ್ಕಾರ 155.4 ಕೋಟಿ ರೂ. ವೆಚ್ಚ ಮಾಡಲಿದೆ ಎಂದು ತಿಳಿಸಿದ ಅವರು, ಇವುಗಳನ್ನು ಪ್ರತಿ ಒಂದು ಟ್ಯಾಬ್‌ಲೆಟ್‌ಗಳಿಗೆ 10,000 ರೂ. ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳೀಗೆ ವಿತರಿಸಲಾಗುತ್ತಿರುವ ಟ್ಯಾಬ್‌ಲೆಟ್‌ಗಳ ಗುಣಮಟ್ಟ ಹಾಗು ಕಲಿಕೆಗೆ ಅಗತ್ಯವಿರುವ ಎಲ್ಲಾ ಫೀಚರ್‌ಗಳ ಬಗ್ಗೆ ಅತಿ ಹೆಚ್ಚು ಗಮನ ನೀಡಲಾಗಿದೆ ಎಂದರು. ಎಲ್ಲಾ ವಿ.ವಿ.ಯ ಕುಲಪತಿಗಳಿಗೆ ಈ ಮಾಹಿತಿ (2ನೇ ಪುಟಕ್ಕೆ)


## ಶಾಮನೂರು ತಿಪ್ಪೇಗುಂಡಿ ಕರಿಯಪ್ಪನವರ ಧರ್ಮಪತ್ನಿ

# ಶ್ರೀಮತಿ ಗಂಗಮ್ಮ ನಿಧನ



ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ 8ನೇ ಕ್ರಾಸ್ ವಾಸಿ
ಶಾಮನೂರು ಗ್ರಾಮದ ತಿಪ್ಪೇಗುಂಡಿ ಕರಿಯಪ್ಪನವರ ಧರ್ಮಪತ್ನಿ ಹಾಗೂ
ಕಾಂಗ್ರೆಸ್ ಮುಖಂಡರಾದ ಶಾಮನೂರು ಟಿ. ಬಸವರಾಜ್ ಅವರ ಮಾತೋಶ್ರೀ

## ಶ್ರೀಮತಿ ಗಂಗಮ್ಮನವರು

ದಿನಾಂಕ 08.01.2021ರ ಶುಕ್ರವಾರ ರಾತ್ರಿ 8.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 81 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.01.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಮೊ. : 98440-99972, 94484 15199

# ಸದಾಶಿವ ವರದಿ ಅನುಷ್ಠಾನಕ್ಕೆ ದಸಂಸ ಮನವಿ



ಹರಿಹರ, ಜ.8- ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಅನುಷ್ಠಾನಗೊಳಿಸುವ ಮೂಲಕ ಮಾದಿಗ ಸಮುದಾಯದವರಿಗೆ ನ್ಯಾಯಸಮ್ಮತ ಒಳ ಮೀಸಲಾತಿ ಕಲ್ಪಿಸಿಕೊಟ್ಟು, ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಕಾರ್ಯಕರ್ತರು ಗುರುವಾರ ನಗರದಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಮನವಿ ನೀಡಿದರು.

ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 67 ವರ್ಷಗಳೇ ಗತಿಸಿದರೂ ಸಮಾಜದಲ್ಲಿ ಸಮಾನತೆ ಮೂಡಿಲ್ಲ. ಮಾದಿಗ ಸಮಾಜದವರಿಗೆ ಇಂದಿನ ಆಧುನಿಕ ಕಾಲದಲ್ಲೂ ಸಾಮಾಜಿಕ ನ್ಯಾಯ ಸಿಕ್ಕಿಲ್ಲ ಎಂಬುದು ಕನ್ನಡಿಯಷ್ಟೇ ಸತ್ಯವಾಗಿದೆ ಎಂದರು.

ಪರಿಶಿಷ್ಟ ಜಾತಿ ಅಡಿಯಲ್ಲಿ ಸರ್ಕಾರಗಳು ನೀಡುತ್ತಿರುವ ಮೀಸಲಾತಿ ಶೋಷಿತ ಸಮುದಾಯದಲ್ಲಿ ಎಷ್ಟರ ಮಟ್ಟಿಗೆ ಸುಧಾರಣೆ ತಂದಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ರಾಜ್ಯದಲ್ಲಿ

**ಹರಿಹರ**

ಮಾದಿಗ ಸಮಾಜ ದವರು ಅಧಿಕ ಸಂಖ್ಯೆಯಲ್ಲಿದ್ದು, ದೊರೆಯುವ ಮೀಸಲಾತಿ ಅತ್ಯಲ್ಪವಾಗಿದೆ. ಇದು ಶೋಷಣೆಯ ಇನ್ನೊಂದು ಮುಖವಾಗಿದ್ದು, ಸಮಾನ ಅಭಿವೃದ್ಧಿಯ ದೃಷ್ಟಿಯಿಂದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಯೋಜಿಸಬೇಕೆಂಬುದು ಸಾಂವಿಧಾನಿಕ ಆಶಯವೂ ಸಹ ಆಗಿದೆ ಎಂದರು.

ಪರಿಶಿಷ್ಟ ಸಮುದಾಯದ ಮುಖಂಡರಾಗಿರುವ ಉಪ ಮುಖ್ಯಮಂತ್ರಿಗಳು ಸದಾಶಿವ ಆಯೋಗದ ವರದಿ ಜಾರಿಗೊಳಿಸುವ ಮೂಲಕ ಶೋಷಿತ ಮಾದಿಗ ಸಮಾಜಕ್ಕೆ ಸಾಮಾಜಿಕ ನ್ಯಾಯ ಕೊಡಿಸಲು ಶೀಘ್ರವೇ ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿದರು.

ಮನವಿ ಸ್ವೀಕರಿಸಿದ ಸಚಿವ ಕಾರಜೋಳ ಅವರು ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಬಿ. ಮಂಜಪ್ಪ ಗುಳದಹಳ್ಳಿ, ಚೌಡಪ್ಪ ಸಿ. ಭಾನುವಳ್ಳಿ, ಎಸ್.ಕೆ. ಹರೀಶ್, ಎಚ್. ನಾಗರಾಜ್, ಹನುಮಂತಪ್ಪ, ಬಸವರಾಜ್, ಕರಿಬಸಪ್ಪ, ಬಸವರಾಜ್, ಚಂದ್ರಪ್ಪ, ಗದಿಗೇಶ್ ಇನ್ನಿತರರಿದ್ದರು.

# ಕೃಷಿ ಕಾಯ್ದೆ ತಿದ್ದುಪಡಿ ರದ್ಧತಿಗೆ ಆಗ್ರಹಿಸಿ ರೈತರಿಂದ ಧರಣಿ




ಹರಿಹರ, ಜ.8- ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಸಂಬಂಧಿತ ಮೂರು ಕಾಯ್ದೆಗಳನ್ನು ರದ್ದುಪಡಿಸಬೇಕು ಎಂಬ ಹೋರಾಟಕ್ಕೆ ಬೆಂಬಲಿಸಿ, ಇಂದು ನಗರದ ವಿವಿಧ ಸಂಘಟನೆಯ ಮುಖಂಡರು ಹಾಗೂ ತಾಲ್ಲೂಕಿನ ರೈತ ಮುಖಂಡರು ಗಾಂಧಿ ವೃತ್ತದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಮಾತನಾಡಿ, ದೇಶದಲ್ಲಿ ಆಡಳಿತ ಮಾಡುತ್ತಿರುವ ಬಿಜೆಪಿ ಸರ್ಕಾರ ರೈತರ ಪರವಾಗಿ ಯೋಜನೆಗಳನ್ನು ರೂಪಿಸಿ ಅವರ ಬೆಳವಣಿಗೆಗೆ ಪೂರಕವಾದ ಯೋಜನೆಯನ್ನು ಜಾರಿಗೆ ತರುವಂತಹ ಕೆಲಸವನ್ನು ಮಾಡದೆ ತನ್ನ ಹಠಮಾರಿ ಧೋರಣೆಯೊಂದಿಗೆ ರೈತರ ಜೀವನದ ಜೊತೆಗೆ ಚೆಲ್ಲಾಟವಾಡುತ್ತಿದೆ. ಗೋ ಹತ್ಯೆ ನಿಷೇಧ, ಲವ್ ಜಿಹಾದ್, ಖಾಸಗೀಕರಣ ಮುಂತಾದಾವುದಗಳಿಂದ ರೈತರಿಗೆ ಯಾವುದೇ ತರಹದ ಉಪಯೋಗ ಆಗುವುದಿಲ್ಲ. ಅದನ್ನು ಬಿಟ್ಟು ರೈತರ ಬೆಳವಣಿಗೆಯ ಬಗ್ಗೆ ಚಿಂತನೆ ಮಾಡುವಂತೆ ಹೇಳಿದರು.

**ಹರಿಹರ**

ಮಾಜಿ ದೂಡ ಸದಸ್ಯ ಹೆಚ್. ನಿಜಗುಣ ಮಾತನಾಡಿ, ದೇಶದ ಬೆನ್ನೆಲುಬು ರೈತರ ಜೀವನದ ಜೊತೆಗೆ ಚೆಲ್ಲಾಟವನ್ನು ಕೇಂದ್ರ ಸರ್ಕಾರ ಕಳೆದ 43 ದಿನಗಳಿಂದ ಆಡುತ್ತಾ ಬಂದಿರುತ್ತದೆ.

ರೈತರ ಸಂಕಷ್ಟದಿಂದ ಬಳಲಿದರೆ ಅದರಿಂದ ದೇಶಕ್ಕೆ ಹಾನಿ ಎಂಬ ಅಂಶವನ್ನು ಮರೆತು ಈ ರೀತಿಯ ಹಠಮಾರಿ ಧೋರಣೆಯನ್ನು ಮಾಡುತ್ತಿದೆ. ಕೂಡಲೇ ಹಠಮಾರಿ ಧೋರಣೆನ ಕೈ ಬಿಟ್ಟು ರೈತರಿಗೆ ಪೂರಕವಾದ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಮುಖಂಡರಾದ ಪ್ರಭುಗೌಡ, ಮಹೇಶಪ್ಪ ದೊಗ್ಗಳ್ಳಿ, ಹಾಲೂರು ನಾಗರಾಜ್, ಚಂದ್ರಪ್ಪ ಅಮರಾವತಿ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಸಂಘಟನೆ ಮುಖಂಡರಾದ ಕಲೀಂ ಬಾಷಾ, ರುದ್ರಗೌಡ ಯಕ್ಕೆಗೊಂದಿ, ಹೆಚ್. ಮಲ್ಲೇಶ್, ಹನುಮಂತಪ್ಪ, ಬಿ. ಮುಗ್ದುಂ, ರಮೇಶ್, ಹರಿ ಜಾದೂಗಾರ್, ಶಂಕರ್ ಮೂರ್ತಿ, ಚೆನ್ನಬಸಪ್ಪ ಹುಲಿಕಟ್ಟಿ, ನಾಗರಾಜ್, ಎಂ.ಎಸ್. ರಾಮು ಇನ್ನಿತರರು ಹಾಜರಿದ್ದರು.

# ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್.ಐ.ಆರ್

**(1ನೇ ಪುಟದಿಂದ)** ಗ್ರಾಮಾಂತರ ಪೊಲೀಸ್ ಠಾಣೆಗೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಿರುದ್ಧ ದೂರು ನೀಡಿದ್ದರು. ಆದರೆ, ಇದುವರೆಗೂ ಎಫ್ಐಆರ್ ದಾಖಲಾಗಿರಲಿಲ್ಲ. ಕೊನೆಗೂ ದೂರಿನ ಆಧಾರದಲ್ಲಿ ಪೊಲೀಸರು ಸಿದ್ದರಾಮಯ್ಯ ಅವರ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ರವಿಕುಶಾಲಪ್ಪ, ಸಿದ್ದರಾಮಯ್ಯ ಅವರು ಕೊಡವರ ಭಾವನೆಗಳಿಗೆ ಘಾಸಿ ಮಾಡಿದ್ದಾರೆ. ಜಾತಿ ನಿಂದನೆ ಮಾಡಿದ್ದಾರೆ. ಹೀಗಾಗಿ ಅವರ ವಿರುದ್ಧ ಐಪಿಸಿ ಸೆಕ್ಷನ್ 153/ಎ ಮತ್ತು 295/ಎ ಅಡಿಯಲ್ಲಿ ಪ್ರಕರಣ ದಾಖಲಿಸಬೇಕಾಗಿತ್ತು. ಆದರೆ, ಸಾಧಾರಣ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಅವರನ್ನು ಪ್ರಕರಣದಿಂದ ಖುಲಾಸೆ ಮಾಡುವ ಹುನ್ನಾರ ನಡೆದಿದೆ. ಆದರೆ ನಾವು ಇಷ್ಟಕ್ಕೆ ಸುಮ್ಮನಾಗುವುದಿಲ್ಲ. ಕಾನೂನು ತಜ್ಞರ ಸಲಹೆ ಪಡೆದು ನ್ಯಾಯಾಲಯದಲ್ಲೂ ಖಾಸಗಿ ದೂರು ದಾಖಲಿಸುತ್ತೇವೆ ಎಂದು ತಿಳಿಸಿದ್ದಾರೆ.

ಒಂದು ವೇಳೆ ಸಿದ್ದರಾಮಯ್ಯ ಅವರು ಕೊಡಗಿಗೆ ಬಂದು ಬಹಿರಂಗ ಕ್ಷಮೆಯಾಚಿಸಿದರೆ, ಸುಮ್ಮನಾಗುವಿರಾ ಎಂಬುದಕ್ಕೆ ಪ್ರತಿಕ್ರಿಯಿಸಿರುವ ರವಿಕುಶಾಲಪ್ಪ, ಸಿದ್ದರಾಮಯ್ಯ ಅವರು ಅಕ್ಷಮ್ಯ ಹೇಳಿಕೆ ನೀಡಿದ್ದಾರೆ. ಹೀಗಾಗಿ ಅದಕ್ಕೆ ಕ್ಷಮೆಯೇ ಇಲ್ಲ, ಏನಿದ್ದರೂ ಅದು ನ್ಯಾಯಾಲಯದಲ್ಲೇ ನಿರ್ಧಾರವಾಗಲಿ ಎಂದರು.

ಮತ್ತೊಂದೆಡೆ ಕಾಂಗ್ರೆಸ್‌ನ ಎಐಸಿಸಿ ವಕ್ತಾರರಾಗಿರುವ ಬಿಜ್ರೇಶ್ ಕಾಳಪ್ಪ ಅವರು ಸಿದ್ದರಾಮಯ್ಯ ಅವರು ಹಂದಿ ಮಾಂಸ ಹೇಳಲು ಹೋಗಿ ದನದ ಮಾಂಸ ಅಂತ ಹೇಳಿದ್ದಾರೆ. ಅದು ಉದ್ದೇಶಪೂರ್ವಕವಾಗಿ ಹೇಳಿರುವ ಹೇಳಿಕೆ ಅಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಹಾಗಾದರೆ ಸಿದ್ದರಾಮಯ್ಯ ಅವರು ಮುಸ್ಲಿಂ, ಕ್ರಿಶ್ಚಿಯನ್ ಎಲ್ಲರೂ ಹಂದಿ ಮಾಂಸ ತಿನ್ನುತ್ತಾರೆ ಎಂದು ಹೇಳಿದ್ದಾರೆಯೇ? ಹಾಗೆ ಹೇಳಿದ್ದರೆ ಆ ಮಾತನ್ನು ಮುಸಲ್ಮಾನರು ಒಪ್ಪಿಕೊಳ್ಳುತ್ತಾರೆಯೇ? ಎಂದು ರವಿಕುಶಾಲಪ್ಪ ಪ್ರಶ್ನಿಸಿದ್ದಾರೆ.

# ಭದ್ರಾ ಬಲದಂಡೆ ನಾಲೆಗೆ ಜ.10ರ ನಂತರ ನೀರು

ಮಲೇಬೆನ್ನೂರು, ಜ.8- ಕಳೆದ 2-3 ದಿನಗಳಿಂದ ಭದ್ರಾ ಅಚ್ಚು-ಕಟ್ಟು ವ್ಯಾಪ್ತಿಯ ಅಲ್ಲಲ್ಲಿ ಮಳೆ ಆಗುತ್ತಿರುವ ಹಿನ್ನಲೆಯಲ್ಲಿ ಭದ್ರಾ ಬಲದಂಡೆ ನಾಲೆಗೆ ನೀರು ಹರಿಸುವುದನ್ನು ಮುಂದೂಡಲಾಗಿದೆ.

ಹವಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಜ.9 ರವರೆಗೆ ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಅಚ್ಚುಕಟ್ಟಿನ ರೈತರೇ ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರಿಗೆ ಸದ್ಯಕ್ಕೆ ನಾಲೆಗೆ ನೀರು ಹರಿಸುವುದು ಬೇಡ ಎಂಬ ಮನವಿ ಮಾಡಿದ್ದಾರೆಂದು ಹೇಳಲಾಗಿದೆ.

ಹಾಗಾಗಿ ಭದ್ರಾ ಬಲದಂಡೆ ನಾಲೆಗೆ ಜ.10 ರ ನಂತರ ಮಳೆ ನೋಡಿಕೊಂಡು ನೀರು ಹರಿಸುವ ಬಗ್ಗೆ ತಿರ್ಮಾನಿಸಲಾಗುವುದೆಂದು ಭದ್ರಾ ಕಾಡಾ ಮೂಲಗಳು ತಿಳಿಸಿವೆ. ಕಳೆದ ವಾರ

**ಭದ್ರಾ ಕಾಲುವೆಗಳಲ್ಲಿ ಸಿಲ್ಟ್ ತೆಗೆಸಲು ಅವಕಾಶ ನೀಡಲು ಆಗ್ರಹ**

ಮಲೇಬೆನ್ನೂರಿನಲ್ಲಿ ನಡೆದಿದ್ದ ಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಅಚ್ಚುಕಟ್ಟಿನ ತೋಟಗಳಿಗೆ ನೀರಿನ ಅವಶ್ಯಕತೆ ಇರುವದರಿಂದ ಜ. 1ರಿಂದ ತಕ್ಷಣ ಎಡದಂಡೆ ನಾಲೆಗೆ ಮತ್ತು ಜ.6 ರಿಂದ ಬಲದಂಡೆ ನಾಲೆಗೆ ನೀರು ಹರಿಸಲು ನಿರ್ಧರಿಸಲಾಗಿತ್ತು ಇದೀಗ ಮಳೆ ಬಂದು ತೋಟಗಳಿಗೆ ಸ್ವಲ್ಪ ಮಟ್ಟಿಗೆ ಹದ ಆಗಿರುವುದರಿಂದ ಸದ್ಯಕ್ಕೆ ನೀರು ಹರಿಸುವುದು ಬೇಡ ಎಂಬ ತಿರ್ಮಾನಕ್ಕೆ ರೈತರೆ ಬಂದಿರುವುದರಿಂದ ಉತ್ತಮ ಬೆಳವಣಿಗೆಯಾಗಿದೆ ಈಗಾಗಲೇ ಅಪ್ಪರ್ ಭದ್ರಾ ಕಾಲುವೆಗೆ ನೀರು ಹರಿಸುವುದನ್ನು ನಿಲ್ಲಿಸಲಾಗಿದೆ.

ಎಡದಂಡೆ ನಾಲೆಗೆ 125 ಕ್ಯೂಸೆಕ್ಸ್ ಮತ್ತು ಗೊಂದಿ ನಾಲೆಗೆ 50 ಕ್ಯೂಸೆಕ್ಸ್ ನೀರನ್ನು ಮಾತ್ರ ಬಿಡಲಾಗುತ್ತಿದೆ.

**ಸಿಲ್ಟ್ ತೆಗೆಸಲು ಮನವಿ:** ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಭದ್ರಾ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಸಲು ಉದ್ಯೋಗ ಖಾತ್ರೆ ಯೋಜನೆಯಡಿ ಕೆಲಸ ಕೈಗೆತ್ತಿಕೊಳ್ಳುವಂತೆ ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಅವರು ದಾವಣಗೆರೆ ಜಿ.ಪಂ ಸಿಇಓ ಶ್ರೀಮತಿ ಪದ್ಮಾ ಬಸವಂತಪ್ಪ ಅವರಿಗೆ ಮನವಿ ಮಾಡಿದ್ದಾರೆ ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಜಿ.ಪಂ ಸಿಇಓ ಅವರು ಕಾಮಗಾರಿ ವಿವರವನ್ನು ಆಯಾ ಗ್ರಾ.ಪಂ ಗಳಿಗೆ ನೀಡುವಂತೆ ಹೇಳಿದ್ದಾರೆ ಎಂದು ತಿಳಿದು ಬಂದಿದೆ.

# ಸೋಮವಾರ ಲಸಿಕೆ

**(1ನೇ ಪುಟದಿಂದ)** ಮೊದಲ ಹಂತದಲ್ಲಿ ರಾಜ್ಯಕ್ಕೆ ನಾಳೆ ಲಸಿಕೆ ಲಭ್ಯವಾಗಲಿದ್ದು, ಎರಡನೇ ಹಂತದಲ್ಲಿ ಲಸಿಕೆ ಪಡೆಯಲಿರುವವರಿಗೆ ಮುಂದಿನ ವಾರವೇ ಕೇಂದ್ರ ಕಳುಹಿಸಲಿದೆ.

ಈಗಾಗಲೇ ಲಸಿಕೆ ವಿತರಣೆಗೆ ರಾಜ್ಯಾದ್ಯಂತ 269 ಆರೋಗ್ಯ ಕೇಂದ್ರಗಳಲ್ಲಿ ತಾಲೀಮು ನಡೆದಿದ್ದು, ಇಂದು ಕೊನೆಯ ಹಂತದ ತಾಲೀಮು ಮುಕ್ತಾಯಗೊಂಡಿತು.

ತಾಲೀಮು ಪೂರ್ಣಗೊಳ್ಳುತ್ತಿದ್ದಂತೆ ಕೇಂದ್ರ ಸರ್ಕಾರ ಲಸಿಕೆ ಕಳುಹಿಸುವ ತಯಾರಿ ನಡೆಸಿದ್ದು, ಲಸಿಕೆ ನೀಡಿಕೆಗೂ ಮಾರ್ಗಸೂಚಿಗಳನ್ನು ಕಳುಹಿಸಲಿದೆ.

ಸೋಮವಾರದಿಂದ ರಾಷ್ಟ್ರಾದ್ಯಂತ ಸಾರ್ವಜನಿಕವಾಗಿ ಲಸಿಕೆ ವಿತರಣೆಯಾಗಲಿದೆ, ನೀವೂ ಕೂಡ ಆಯ್ದ ಕೇಂದ್ರಗಳಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ದಿನವೊಂದರಲ್ಲಿ 100 ರಿಂದ 200 ಮಂದಿಗೆ ಲಸಿಕೆ ನೀಡಿಕೆಗೆ ಸಿದ್ಧತೆ ಮಾಡಿಕೊಳ್ಳಿ ಎಂದು ಸೂಚಿಸಿದೆ.

ಲಸಿಕೆ ತೆಗೆದುಕೊಳ್ಳುವ ವ್ಯಕ್ತಿ ಮೊದಲು ಹೆಸರು ನೋಂದಾಯಿಸಿಕೊಳ್ಳಬೇಕು, ಈ ಸಂದರ್ಭದಲ್ಲಿ ಆಧಾರ್ ಮತ್ತು ಇನ್ನಿತರೆ ಸರ್ಕಾರಿ ದಾಖಲೆ ಒದಗಿಸಿಕೊಳ್ಳಬೇಕು.

# ಕೂಡ್ಲಿಗಿ : ದೆಹಲಿ ಪ್ರತಿಭಟನೆ ಬೆಂಬಲಿಸಿ ರೈತರ ಮನವಿ



ಕೂಡ್ಲಿಗಿ, ಜ.8 - ದೆಹಲಿಯಲ್ಲಿ ರೈತರಿಗೆ ಮಾರಕವಾಗುವ ಕಾನೂನುಗಳನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಿ 45 ದಿನಗಳಿಂದ ಮಾಡುತ್ತಿರುವ ಹೋರಾಟಕ್ಕೆ ಕೂಡ್ಲಿಗಿಯ ಪ್ರಾಂತ್ಯ ರೈತ ಸಂಘ ಹಾಗೂ ಸೆಂಟರ್ ಆಫ್ ಟ್ರೇಡ್ ಯೂನಿಯನ್ ಬೆಂಬಲಿಸಿ ಶುಕ್ರವಾರ ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿತು.

ಈ ಸಂದರ್ಭದಲ್ಲಿ ರೈತ ಮುಖಂಡ ಗುನ್ನಳ್ಳಿ ರಾಘವೇಂದ್ರ, ಸಿ.ಐ.ಟಿ.ಯು ಮುಖಂಡ ಸಿ.ವಿರುಪಾಕ್ಷಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೆ.ಮಾಲಿಂಗ, ಬಿ.ರಫಿ, ಮಹದೇವಪ್ಪ, ಹಂಪಣ್ಣ, ಬಿ.ಮರುಳಸಿದ್ದಚಾರಿ ಮತ್ತಿತರರು ಹಾಜರಿದ್ದರು.

# ಕಾಲೇಜು ವಿದ್ಯಾರ್ಥಿಗಳಿಗೆ ಟ್ಯಾಬ್

**(1ನೇ ಪುಟದಿಂದ)** ನೀಡಿರುವ ಉಪ ಮುಖ್ಯಮಂತ್ರಿಗಳು, ಮೊದಲ ಮತ್ತು ದ್ವಿತೀಯ ವರ್ಷದ ನೇರ ತರಗತಿಗಳನ್ನು ಸಂಕ್ರಾಂತಿ ಹಬ್ಬದ ನಂತರ ಯಾವ ದಿನದಿಂದ ಆರಂಭಿಸಬೇಕು ಎಂಬ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು ಎಂದಿದ್ದಾರೆ.

ಈಗಾಗಲೇ ಅಂತಿಮ ವರ್ಷದ ವಿದ್ಯಾರ್ಥಿಗಳ ನೇರ ತರಗತಿಗಳು ಯಶಸ್ವಿಯಾಗಿ ನಡೆಯುತ್ತಿವೆ. ಆ ಯಶಸ್ಸಿನ ಹಿನ್ನೆಲೆಯಲ್ಲಿ ಉಳಿದ ತರಗತಿಗಳನ್ನು ಶುರು ಮಾಡಲಾಗುವುದು. ಯುಜಿಸಿ ಮತ್ತು ಕೋವಿಡ್ ಮಾರ್ಗಸೂಚಿ ಪ್ರಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಮುಖ್ಯವಾಗಿ ಈ ಸಭೆಯಲ್ಲಿ 2021-22ರ ಶೈಕ್ಷಣಿಕ ವರ್ಷವನ್ನು ಯಾವಾಗಿನಿಂದ ಆರಂಭಿಸಬೇಕು ಎಂಬ ಬಗ್ಗೆ ಮಹತ್ವದ ಚರ್ಚೆ ನಡೆಯಿತು.

ಮೇ ತಿಂಗಳ ಎರಡನೇ ವಾರದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪರೀಕ್ಷೆಯನ್ನು ಈಗಾಗಲೇ ಘೋಷಣೆ ಮಾಡಲಾಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಉನ್ನತ ಶಿಕ್ಷಣದ ಶೈಕ್ಷಣಿಕ ವೇಳಾಪಟ್ಟಿಯನ್ನು ರೂಪಿಸಲಾಗುವುದು ಎಂದರು.

ಆನ್‌ಲೈನ್ ಪರೀಕ್ಷೆಗಳಿಗಿಂತ ಪೆನ್ ಮತ್ತು ಪೇಪರ್ ಆಧಾರಿತ ಆಫ್‌ಲೈನ್ ಪರೀಕ್ಷೆಯೇ ಉತ್ತಮ ಎಂದು ವಿಟಿಸಿಯು ಕುಲಪತಿ ಪ್ರೊ.ಕರಿಸಿದ್ದಪ್ಪ ಸೇರಿದಂತೆ ಎಲ್ಲ ಕುಲಪತಿ, ಕುಲಸಚಿವರು ಸಲಹೆ ಮಾಡಿದರು.

ಯುಜಿಸಿ ನಿಯಮದಂತೆ ಮಾರ್ಚ್‌ನಲ್ಲಿ ಪರೀಕ್ಷೆ ಮುಗಿಯಬೇಕಾಗುತ್ತದೆ. ಹಲವು ವಿವಿಗಳ ವ್ಯಾಪ್ತಿಯಲ್ಲಿ ಪಾಠಗಳು ಮುಗಿಯದ ಕಾರಣ ಏಪ್ರಿಲ್ ಅಥವಾ ಮೇನಲ್ಲಿ ಪರೀಕ್ಷೆ ನಡೆಸುವ ಬಗ್ಗೆ ಚಿಂತಿಸಲಾಗುತ್ತಿದ್ದು, ಶೀಘ್ರವೇ ಈ ಬಗ್ಗೆ ಅಂತಿಮ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ವಿದ್ಯಾರ್ಥಿಗಳ ಬಸ್ ಪಾಸ್ ಗೊಂದಲ ಪರಿಹಾರ ಸಂಬಂಧ ಶೀಘ್ರದಲ್ಲಿಯೇ ಉಪ ಮುಖ್ಯಮಂತ್ರಿಯೂ ಆದ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು. ಹಳೆ ಬಸ್ ಪಾಸ್ ಚಾಲನೆಯಲ್ಲಿ ಇರುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ಸೂಕ್ತ ಮಾಹಿತಿ ನೀಡಲಾಗುವುದು ಎಂದರು.


ಉಳಿದಂತೆ ತರಗತಿಗಳು ಆರಂಭವಾದ ಮೇಲೆ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸಲಾಗುವುದು. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದರು.

# ಆಸ್ತಿ ವಿವಾದ : ಎಕ್ಕೆಗೊಂದಿಯಲ್ಲಿ ಟ್ರ್ಯಾಕ್ಟರ್ ಹತ್ತಿಸಿ ತಾಯಿ, ಅಕ್ಕನ ಕೊಲೆ

ಮಲೇಬೆನ್ನೂರು, ಜ.8- ಆಸ್ತಿ ವಿವಾದ ಹಿನ್ನೆಲೆಯಲ್ಲಿ ತನ್ನ ಸ್ವಂತ ತಾಯಿ ಮತ್ತು ಸಹೋದರಿಯನ್ನು ತಮ್ಮನೇ ಟ್ರ್ಯಾಕ್ಟರ್ ಹತ್ತಿಸಿ ಕೊಲೆ ಮಾಡಿರುವ ಘಟನೆ ಎಕ್ಕೆಗೊಂದಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ತಾಯಿ ಸರೋಜಮ್ಮ (63), ಮಗಳು ಜ್ಯೋತಿ (40) ಸಾವಿಗೀಡಾದ ದುರ್ದೈವಿಗಳಾಗಿದ್ದಾರೆ. ಶುಕ್ರವಾರ ಕೋರ್ಟ್‌ನಲ್ಲಿ ಜಮೀನು ಆಸ್ತಿ ವಿವಾದದ ವಿಚಾರಣೆ ಮುಗಿಸಿಕೊಂಡು ವಾಪಸ್ ಬರುತ್ತಿದ್ದ ತಾಯಿ-ಅಕ್ಕನ ಮೇಲೆ ಸ್ವಂತ ತಮ್ಮನೇ ಟ್ರ್ಯಾಕ್ಟರ್ ಹತ್ತಿಸಿ ಕೊಲೆ ಮಾಡಿದ್ದಾನೆಂದು ಪತ್ನಿಯನ್ನು ಕಳೆದುಕೊಂಡ ಪತಿ ಶಿವರಾಜ್ ಎಂಬಾತ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾನೆ. ಟ್ರ್ಯಾಕ್ಟರ್ ಹತ್ತಿಸಿ ಕೊಲೆ ಮಾಡಿದ್ದಾನೆ ಎನ್ನಲಾದ ಭರಮಗೌಡ ಎಂಬ ವ್ಯಕ್ತಿ ಘಟನೆಯ ನಂತರ ಪರಾರಿಯಾಗಿದ್ದಾನೆ ಎನ್ನಲಾಗಿದೆ. ಈ ಘಟನೆ ಕುರಿತು ದೂರು ದಾಖಲಿಸಿಕೊಂಡಿರುವ ಮಲೇಬೆನ್ನೂರು ಪೊಲೀಸರು ಆರೋಪಿ ಪತ್ತೆಗಾಗಿ ಮೂರು ತಂಡ ರಚಿಸಿ ತನಿಖೆ ಕೈಗೊಂಡಿದ್ದಾರೆ.

## ಬೇತೂರು ಸುರೇಂದ್ರಕುಮಾರ್ ನಿಧನ



ದಾವಣಗೆರೆ ನರಸರಾಜ ರಸ್ತೆ ವಾಸಿ **ಬೇತೂರು ಸುರೇಂದ್ರಕುಮಾರ್** (78) ಅವರು ದಿನಾಂಕ 8.01.2021 ರಂದು ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾಗಿದ್ದಾರೆ. ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.1.2021 ರಂದು ಶನಿವಾರ ಮಧ್ಯಾಹ್ನ 12.30 ಕ್ಕೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ :**

**70199 88456**

## ಎಸ್.ಬಿ. ಚನ್ನಳ್ಳಿ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 18ನೇ ಕ್ರಾಸ್, ಸಿದ್ದೇಶ್ವರ ಕಾಲೇಜಿನ ಹಿಂಭಾಗ, ನಿವೃತ್ತ ಡೆಪ್ಯೂಟಿ ತಹಶೀಲ್ದಾರ್, ಸಂಚಿತ ಕೋ ಆಪ್ ಸೊಸೈಟಿ ಮಾಜಿ ನಿರ್ದೇಶಕರು, ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತದ ಹಾಲಿ ನಿರ್ದೇಶಕರಾದ **ಎಸ್.ಬಿ. ಚನ್ನಳ್ಳಿ** (87) ಅವರು ದಿನಾಂಕ 08.1.2021 ರಂದು ಶುಕ್ರವಾರ ರಾತ್ರಿ 10.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09.1.2021 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ :**

**98450 54329, 94492 02220**

## ವಿಶ್ರಾಮ್ ಪಿ. ರಾಯ್ಕರ್ ನಿಧನ



ದಾವಣಗೆರೆ ಕೆ.ಟಿ.ಜೆ ನಗರದ 3ನೇ ಮುಖ್ಯರಸ್ತೆ ಶ್ರೀ ಓಂಕಾರ ಜ್ಯುವೆಲರಿ ಮಾರ್ಟ್ ಮಾಲೀಕರಾದ **ವಿಶ್ರಾಮ್ ಪಿ. ರಾಯ್ಕರ್** (68) ಅವರು ದಿನಾಂಕ 8.01.2021 ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.01.2021 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ : 98443 26521**

## ಡಾ. ರಾಘವೇಂದ್ರ ಗುರೂಜಿ ಅವರಿಗೆ ಮಾತೃ ವಿಯೋಗ




ದಾವಣಗೆರೆ ದೇವರಾಜ್ ಅರಸ್ ಬಡಾವಣೆ, 'ಸಿ' ಬ್ಲಾಕ್ ವಾಸಿ, ನಗರದ ಆದರ್ಶ ಯೋಗ ಪ್ರತಿಷ್ಠಾನದ ಯೋಗ ಗುರು ಡಾ. ರಾಘವೇಂದ್ರ ಗುರೂಜಿ ಅವರ ಮಾತೃಶ್ರೀ **ಶ್ರೀಮತಿ ವೇದಾವತಮ್ಮ (ಶ್ರೀಮತಿ ಗೌರಮ್ಮ)** (82 ವರ್ಷ) ಇವರು ದಿನಾಂಕ 08.01.2021ರ ಶುಕ್ರವಾರ ಮಧ್ಯಾಹ್ನ 12.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.01.2021ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನಗರದ ಪಿ.ಬಿ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಬಸವರಾಜ್ ಎನ್ ನಿಧನ




ದಾವಣಗೆರೆ ನಗರದ ಸ್ವಾಮಿ ವಿವೇಕಾನಂದ ಬಡಾವಣೆ ವಾಸಿ ನಿವೃತ್ತ ಅಧೀಕ್ಷಕ ಅಭಿಯಂತರ ಬಸವರಾಜ್ ಎನ್. (68) ಅವರು ದಿನಾಂಕ:08-01-2021ರ ಶುಕ್ರವಾರ ಸಂಜೆ 7:30ಕ್ಕೆ ದೈವಾಧೀನರಾದರು. ಪತ್ನಿ, ಪುತ್ರ, ಸೊಸೆ, ಮೊಮ್ಮಗಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ:09-01-2021ರ ಶನಿವಾರ ಅಪರಾಹ್ನ 1:00 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಬ್ಯಾಡಗಿ ಶೇಖರಪ್ಪ ನಿಧನ



ದಾವಣಗೆರೆ ತಾ. ನಾಗರಕಟ್ಟೆ ಗ್ರಾಮದ ವಾಸಿ ಬ್ಯಾಡಗಿ ಶೇಖರಪ್ಪ (84) ಇವರು ದಿನಾಂಕ 8.01.2021 ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ನಿಧನರಾಗಿದ್ದಾರೆ. ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 9.01.2021 ರ ಶನಿವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಂತಃ ಜಮೀನಿನಲ್ಲಿ ನೆರವೇರಿಸಲಾಗುವುದು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 7.01.2021 ರಂದು ನಿಧನರಾದ ಹಳ್ಳಿಹಾಳ್ ಗ್ರಾಮದ ಹಿರಿಯರೂ, ನಮ್ಮ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ

**ಶ್ರೀ ಹೆಚ್. ಮಹಾದೇವಪ್ಪಗೌಡ್ರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ. ಮೃತರು ಶ್ರೀ ನಂದಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ, ನಿರ್ದೇಶಕರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸುತ್ತೇವೆ.

**ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಹಕಾರರು**

**ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ,**

ಪ್ರಧಾನ ಕಛೇರಿ : ಮಲೇಬೆನ್ನೂರು, ಶಾಖೆ : ನಂದಿಗುಡಿ.

## ನಗರದಲ್ಲಿಂದು ಶನೇಶ್ವರ ಸ್ವಾಮಿ ಕಾರ್ತಿಕ

ದೇವರಾಜ ಅರಸು ಬಡಾವಣೆ ಇಡಬ್ಲ್ಯೂ ಎಸ್ ಕಾಲೋನಿಯಲ್ಲಿರುವ ಶ್ರೀ ಸಿದ್ದಿವಿನಾಯಕ ಸೇವಾ ಸಮಿತಿ ಆಶ್ರಯದಲ್ಲಿ ಶ್ರೀ ಗಣೇಶ ಸ್ವಾಮಿ, ಶ್ರೀ ಶನೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿಯ ಕಾರ್ತಿಕೋತ್ಸವ ಇಂದು ನಡೆಯಲಿದೆ.

## ಮಲೇಬೆನ್ನೂರು : ಲಾರಿ ತಿವಿದು ವ್ಯಕ್ತಿ ಸಾವು

ಮಲೇಬೆನ್ನೂರು, ಜ.8- ಇಲ್ಲಿನ ಪುರಸಭೆ ಕಚೇರಿ ಮುಂಭಾಗ ಹೆದ್ದಾರಿಯಲ್ಲಿ ಗುರುವಾರ ರಾತ್ರಿ ಲಾರಿ ತಿವಿದ ಪರಿಣಾಮ ತಲೆಗೆ ತೀವ್ರವಾಗಿ ಪೆಟ್ಟುಬಿದ್ದ ಕಾರಣ ನೆಹರು ನಗರ ವಾಸಿ ಬಿಳಸನೂರು ಮಂಜುನಾಥ್ ಎಂಬಾತ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಲಾರಿ ಚಾಲಕ ವಾಹನ ಸಮೇತ ತಪ್ಪಿಸಿಕೊಂಡಿ ದ್ದಾನೆ. ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿಕಾರಿ- ಶಾರ್ವರಿ

ವಿಕಾರಿಯ ಪ್ರತಿ ಪದದಲ್ಲಿ
ಜಗವೇ ವಿಕಾರವಾಗಿಲ್ಲ
ನಿರಂತರ ನಿಸರ್ಗದ ಅತ್ಯಾಚಾರ
ಪಂಚಭೂತಗಳ ಸಿಟ್ಟಿನ ಪ್ರತಿಕಾರ.!

ಸಂವತ್ಸರದ ನಾಮದ ಹಿರಿಮೆ
ಖಾರವನ್ನೇ ಕಾರಿದ ವಿಕಾರಿ ಮಹಿಮೆ
ವಿಕಾರ ರೂಪದ ಕ್ರೂರ ಸಂಚಲನ
ವರುಣನ ಆರ್ಭಟದಲ್ಲಿ ಜಲನರ್ತನ!

ಭೂರಮೆಯ ಒಡಲ ಲಾವಾರಸ
ಉಕ್ಕುಕ್ಕಿ ಹರಿಯಿತು ನದಿಯಂತೆ
ಚಂಡಮಾರುತನ ಉಗ್ರ ರೂಪ
ಸುರುಳಿ ಸುರುಳಿಯಲ್ಲಿ ಶೇಷನಂತೆ!

ವಿಕಾರಿಯ ಹಿಂದಿಕ್ಕಿ ಶಾರ್ವರಿ
ಮೇರೆ ಮೀರಿ ನಟ ಭಯಂಕರಿ!
ಬಂದೇ ಬಿಟ್ಟಿತು ಕೊರೊನಾ ಹೆಮ್ಮಾರಿ
ಬೆಚ್ಚಿ ಬಿದ್ದಿತು ಜಗವು ಭ್ರಾಂತಿಯಲ್ಲಿ !

ಶಾರ್ವರಿ ಸರಿಯುವ ಬಗೆಯಲ್ಲಿ
ಯುಗಾದಿಯ ನವ ಸಂವತ್ಸರದಲ್ಲಿ
'ಪ್ಲವನಾಮ' ಶುಭ ನಾಮದಾರಂಭ
ನಡೆಯಲೆಲ್ಲೆಡೇ ಹರ್ಷ ಸಮಾರಂಭ !

**ವೀಣಾ ಕೃಷ್ಣಮೂರ್ತಿ**, ದಾವಣಗೆರೆ.

# ಎಂಟನೇ ಸುತ್ತಲ್ಲೂ ವಿಫಲ

**(1ನೇ ಪುಟದಿಂದ)** ರೀತಿಯ ಯಾವುದೇ ಪ್ರಸ್ತಾಪ ಮುಂದಿಟ್ಟಿಲ್ಲ. ಅಂತಹ ಪ್ರಸ್ತಾಪ ಮುಂದಿಟ್ಟರೆ ಸರ್ಕಾರ ನಿರ್ಧರಿಸಲಿದೆ ಎಂದಿದ್ದಾರೆ.

ಸಭೆಯ ನಂತರ ಮಾತನಾಡಿರುವ ರೈತ ಮುಖಂಡ ಜೋಗಿಂದರ್ ಸಿಂಗ್ ಉಗ್ರಹಣ್, ಸಭೆ ಅಪೂರ್ಣವಾಗಿದೆ. ಮುಂದಿನ ಸುತ್ತಿನಲ್ಲಿಯೂ ಸಹ ಯಾವುದೇ ನಿರ್ಧಾರವಾಗುವ ಸಾಧ್ಯತೆ ಇಲ್ಲ. ಕಾಯ್ದೆ ವಾಪಸ್ ಪಡೆಯುವುದರ ಹೊರತಾಗಿ ಬೇರೆ ಯಾವುದಕ್ಕೂ ನಾವು ಒಪ್ಪುವುದಿಲ್ಲ ಎಂದಿದ್ದಾರೆ.

ಇನ್ನೋರ್ವ ರೈತ ಮುಖಂಡ ಹನ್ನಾನ್ ಮೊಲ್ಲ ಮಾತನಾಡಿ, ರೈತರು ಸಾಯುವವರೆಗೆ ಹೋರಾಡಲು ಸಿದ್ಧರಿದ್ದಾರೆ. ನ್ಯಾಯಾಲಯಕ್ಕೆ ಹೋಗುವುದು ಆಯ್ಕೆಯಲ್ಲ ಎಂದಿದ್ದಾರೆ.

ಸರ್ಕಾರ 'ಲಾ ವಾಪ್ಸಿ' (ಕಾಯ್ದೆಗಳನ್ನು ವಾಪಸ್ ಪಡೆಯುವ ನಂತರವೇ) 'ಘರ್ ವಾಪ್ಸಿ' (ಮನೆಗೆ ಮರಳುವುದು) ಆಗಲಿದೆ ಎಂದು ರೈತ ಮುಖಂಡರು ಸರ್ಕಾರದ ಜೊತೆ ಚರ್ಚೆ ನಡೆಸುವ ವೇಳೆ ತಿಳಿಸಿದ್ದಾರೆ. ಆದರೆ, ಸರ್ಕಾರ ಕಾಯ್ದೆಗಳ ಪ್ರತಿಯೊಂದು ಅಂಶವನ್ನು ಚರ್ಚಿಸಬೇಕೆಂದು ಬಯಸಿದೆ.

ಆದರೆ ಸಭೆಯಲ್ಲಿ ಮಾತನಾಡಿದ ಸಚಿವರು, ಕಾಯ್ದೆಗಳನ್ನು ವಾಪಸ್ ಪಡೆಯುವ ಸಾಧ್ಯತೆ ತಳ್ಳಿ ಹಾಕಿದ್ದು, ಸುಧಾರಣಾ ಕ್ರಮಗಳನ್ನು ಹಲವು ರಾಜ್ಯಗಳ ದೊಡ್ಡ ಸಂಖ್ಯೆಯ ರೈತರು ಸ್ವಾಗತಿಸಿದ್ದಾರೆ.

ರೈತ ಸಂಘಟನೆಗಳು ಇಡೀ ದೇಶದ ಹಿತ ಪರಿಗಣಿಸಬೇಕು ಎಂದು ತಿಳಿಸಿದ್ದಾರೆ.

# ಜಾನ್ ಡಿಸ್ಟಿಲರೀಸ್‌ನಲ್ಲಿ ಅಗ್ನಿ ದುರಂತ

**(1ನೇ ಪುಟದಿಂದ)** ಹರಿಹರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಮದ್ಯ ತಯಾರಿಸಲು ಬಳಸುವ ಅಂದಾಜು 1.50 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕಿಗೆ ಬೆಂಕಿ ಹತ್ತಿಕೊಂಡಿದೆ. ಒಟ್ಟು ಇದೇ ರೀತಿ ಇರುವ 8 ಸ್ಪಿರಿಟ್ ತುಂಬಿದ ಟ್ಯಾಂಕರ್‌ಗಳು ಸುಟ್ಟು ಹೋಗಿವೆ.

ಈ ಬೆಂಕಿ ಅವಘಡಕ್ಕೆ ಶಾರ್ಟ್ ಸರ್ಕ್ಯೂಟ್ ಕಾರಣ ಎಂದು ಹೇಳಲಾಗುತ್ತಿದೆ. ಹರಪನಹಳ್ಳಿ, ಹರಿಹರ, ರಾಣೇಬೆನ್ನೂರು, ದಾವಣಗೆರೆ ಸೇರಿ ಒಟ್ಟು 12 ಅಗ್ನಿ ಶಾಮಕ ದಳದ ಜಲ ವಾಹನಗಳು ಆಗಮಿಸಿ, ಬೆಂಕಿಯನ್ನು ಹರ ಸಾಹಸ ಪಟ್ಟು ನಿಯಂತ್ರಣಕ್ಕೆ ತಂದಿವೆ.

ಬೆಂಕಿ ಹತ್ತಿದ ಸ್ಥಳದಲ್ಲಿ 120 ಕಾರ್ಮಿಕರು ಕೆಲಸ ಮಾಡುತ್ತಿದ್ದು, ಬೆಂಕಿ ಹತ್ತಿಕೊಂಡ ಬಳಿಕ ಎಲ್ಲರೂ ಹೊರಗಡೆ ಓಡಿ ಹೋಗಿದ್ದಾರೆ, ನಾಲ್ವರು ಮಾತ್ರ ಸಿಕ್ಕಿ ಹಾಕಿಕೊಂಡಿದ್ದು, ಅದರಲ್ಲಿ ಒಬ್ಬ ಕಾರ್ಮಿಕ ಸಾವನ್ನಪ್ಪಿದ್ದಾನೆ. ಉಳಿದ ಮೂವರು ತೀವ್ರ ಗಾಯಗೊಂಡಿದ್ದಾರೆ.

ಬೆಳಗ್ಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಮದ್ಯ ತುಂಬಿದ ಟ್ಯಾಂಕರ್‌ಗಳಿಗೆ ಬೆಂಕಿ ಬಿದ್ದಿದೆ.



ಗೋಡೆಗಳು, ತಗಡಿನ ಛಾವಣಿಗಳು ಬೆಂಕಿಯ ಜಳಕ್ಕೆ ಕುಸಿದು ಬೀಳುತ್ತಿದ್ದವು. ಪ್ರಾಥಮಿಕ ಮಾಹಿತಿ ಪ್ರಕಾರ ಅಂದಾಜು ನೂರು ಕೋಟಿ ರುಪಾಯಿ ಮೌಲ್ಯದ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಬೆಂಗಳೂರಿನ ಪೌಲ್ ಜಾನ್ ಎಂಬುವವರು ಈ ಡಿಸ್ಟಲರಿಯನ್ನು ನಡೆಸುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಘಟನಾ ಸ್ಥಳಕ್ಕೆ ತಹಶೀಲ್ದಾರ್ ಎಲ್.ಎಂ. ನಂದೀಶ್ ಹಾಗೂ ಹಲುವಾಗಲು ಪಿಎಸ್ ಐ ಪ್ರಶಾಂತ್ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಕುರಿತು ಹಲುವಾಗಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

# ಅಧಿಕ ಸಸ್ಯಗಳ ಸಾವಯವ ಪೇರಲ ತಳಿ ತಾಂತ್ರಿಕತೆಗಳು

ಪ್ರೊ. ವಿಜಯಕುಮಾರ್ ಗಿಡ್ನವರ್
ಮೊ : 9480750610





ಇದುವರೆಗೆ ಪೇರಲ ಸಸ್ಯಗಳ ನಡುವಣ ಅಂತರ 18x18 ಇಲ್ಲವೇ 23x23 ಎಂದು ಕೃಷಿ ಅಥವಾ ತೋಟಗಾರಿಕೆ ವಿಶ್ವವಿದ್ಯಾಲಯಗಳು ಶಿಫಾರಸ್ಸು ಮಾಡಿದ್ದನ್ನು ರಾಜ್ಯದ ಎಲ್ಲಾ ರೈತರು ಅನುಸರಿಸುತ್ತ ಬಂದಿದ್ದರು.

ಈ ದಿಶೆಯಲ್ಲಿ ಒಂದು ಎಕರೆಗೆ ಅಧಿಕ ಸಸ್ಯ (ಹೈಡೆನ್ಸಿಟಿ) ಸಂಖ್ಯೆಯನ್ನು ಇಡುವ ಅಂದರೆ, ಸಸ್ಯಗಳ ನಡುವಣ ಅಂತರ ಕಡಿಮೆ ಗೊಳಿಸುವ ಪ್ರಯೋಗಗಳು ದೇಶದ ಎಲ್ಲಾ ಸಂಶೋಧನಾ ಸಂಸ್ಥೆಗಳಲ್ಲಿ 3 ದಶಕಗಳಿಂದಲೂ ಜರುಗಿದವು. ಈ ದಶಕದ ಆರಂಭದಲ್ಲಿ ಪೇರಲ (ಜಿವಿಲಾಸಾ) ತಳಿಯ ಅಂತರದ ಪ್ರಾತ್ಯಕ್ಷಿಕೆಯನ್ನು ರಾಜ್ಯದಲ್ಲಿ ಪ್ರಪ್ರಥಮ ಆರಂಭಿಸಿದವರು. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕೂರಣಿವಾಡಿ ಗ್ರಾಮದ ಯುವ ಕೃಷಿಕ ಗೋಪಾಲ ಪೂಜಾರಿ ಎಂದು ಹೇಳ ಲಾಗಿದೆ. (ಈ ಪ್ರಾತ್ಯಕ್ಷಿಕೆಯ ಉಸ್ತುವಾರಿ ಲೇಖಕರದ್ದು)

ಈ ಯುವ ಕೃಷಿಕ ಗುಜರಾತಿನ ಅಹಮದ ಬಾದ್‌ಗೆ ಭೇಟಿ ನೀಡಿದ ಸಮಯದಲ್ಲಿ ಅಲ್ಲಿಯ ಕೃಷಿಕರ ಹೊಲದಲ್ಲಿ, ಹೈಡನ್ಸಿಟಿ ತಾಂತ್ರಿಕತೆಗಳನ್ನು ವೀಕ್ಷಿಸಿದ್ದ, 2011-2012 ರಲ್ಲಿ ಅಲ್ಲಿಂದ 100 ಜಿವಿಲಾಸ್ ಪೇರಲ ತಳಿಯ ಸಸ್ಯಾಭಿವೃದ್ಧಿ ಆರಂಭಿಸಿದ. ತಾಯಿ ಸಸ್ಯಗಳಿಂದ ಬಂದ ಈ ನೂತನ ತಳಿ ಜೀವಿಲಾಸ್‌ದೊಂದಿಗೆ ಶಿಫಾರಸ್ಸಿನ ಲ್ಲಿದ್ದ ಲಖನೌ 49 (ಸರದಾರ) ತಳಿಯು ಸಸ್ಯಗಳನ್ನು ಸಿದ್ಧಗೊಳಿಸಿ, 10 ಗುಂಟೆ ಯಲ್ಲಿ ನೂತನ ಹೈಡೆನ್ಸಿಟಿ ಪೇರಲ ತಾಂತ್ರಿಕತೆ ತನ್ನ ಕ್ಷೇತ್ರದಲ್ಲಿ ಆರಂಭಿಸಿದ್ದ. ರೈತರಿಬ್ಬರ ಈ ಪ್ರಯೋಗ ಶೀಲ ವಿಚಾರಗಳ ಬಗ್ಗೆ ಈ ಹಿಂದೆ ಲೇಖನ ಪ್ರಕಟವಾಗಿತ್ತು.

ಹೈಡೆನ್ಸಿಟಿ ತಾಂತ್ರಿಕತೆ ಎಂದರೇನು? 22x22 ಅಡಿ ಅಂತರದ ಬದಲಾಗಿ 10x5, 10x3 ಹಾಗೂ 10x2 ಅಡಿ ಅಂತರವಿಟ್ಟು ಪೇರಲ ಜಿ-ವಿಲಾಸ್ ತಳಿ ಪ್ರಯೋಗಿಸಿದ, ತಾಂತ್ರಿಕತೆಯೇ ಅಧಿಕ ಸಸ್ಯಗಳ ಅಭಿವೃದ್ಧಿ.

**ಭೂಮಿ ತಯಾರಿಕೆ :** ಪ್ರತಿಯೊಂದು ಸಸ್ಯ ನೆಡುವಾಗ 1x1x1 ಅಡಿ ಆಕಾರದ ಗುಂಡಿ ನಿರ್ಮಿಸಿದ್ದ. ಅದರಲ್ಲಿ ವರ್ಮಿ ಕಾಂಪೋಸ್ಟ್, ಅದರಲ್ಲಿಯ ಮಣ್ಣು ಹಾಗೂ ಉಸುಕು ಮಿಶ್ರಣ ಮಾಡಿ, ಗುಂಡಿಗಳಲ್ಲಿ ತುಂಬಿದ್ದ. ಅದರಲ್ಲಿ ಪೇರಲ ಸಸ್ಯ ನೆಟ್ಟು, ಪ್ರತಿ ಸಸ್ಯಕ್ಕೂ ಹನಿ ನೀರಾವರಿ ಡ್ರಿಪ್‌ಗಳಿನ್ನಿಟ್ಟರು. ಈ ತಾಂತ್ರಿಕತೆಯಲ್ಲಿಯ ಜಿ ವಿಲಾಸ್ ತಳಿ ಹಾಗೂ ಪ್ರಥಮ ಫಲದ ಇಳುವರಿ ಸರಾಸರಿ ಸಸ್ಯ ಒಂದಕ್ಕೆ 150-200 ಕಾಯಿಗಳಾಗಲಿವೆ.

**ಸಸ್ಯ ಸಂರಕ್ಷಣೆ :** ಸಸ್ಯ ಸಂರಕ್ಷಣಾ ಸಿಂಪರಿಸುವಲ್ಲಿ, ಜೈವಿಕ ಕೀಟನಾಶಕ ಹಾಗೂ ಜೈವಿಕ ಶಿಲೀಂಧ್ರ ನಾಶಕಗಳನ್ನು ಎರಡು ಬಾರಿ ಸಿಂಪಡಿಸಿದರು. 10x5, 10x3, 10x2, ಈ ಮೂರು ಅಂತರಗಳಲ್ಲಿ ಸಾಗುವಳಿಗೆ 10x5 ಅಂತರ ಸೂಕ್ತವಾಗಿತ್ತು.

ಮಧ್ಯಂತರ ಕಳೆ ಕಸ ನಿಯಂತ್ರಿಸುವಲ್ಲಿ, ಕುಂಟೆಯನ್ನೂ ಎತ್ತುಗಳ ಮೂಲಕ ಹಾಗೂ ಟ್ರ್ಯಾಕ್ಟರ್ ಮೂಲಕ ಎರಡು ಬಾರಿ ಎರಡು ಮಗ್ಗಲು ಕುಂಟೆ ಹೋಡೆಯಲಿಕ್ಕೆ ಸಾಧ್ಯವಾಗಿತ್ತು. ಸಾಲುಗಳ ಮಧ್ಯದಲ್ಲಿ ಸೆಣಬು ಹಸೀರಲೆ ಗೊಬ್ಬರ ಬೆಳೆದು ಹುವಾಡುವ 45 ದಿನಗಳಲ್ಲಿ, ಮೊಗ್ಗು ಹೊಡೆದು ಕಳೆ ನಿಯಂತ್ರಿಸುವದರೊಂದಿಗೆ, ಮಣ್ಣಿನ ಫಲವತ್ತತೆ ಹೆಚ್ಚಿಸಿದಂತಾಯ್ತು. ಪೇರಲ ಸಸ್ಯ ಒಂದರಲ್ಲಿ ಜಿವಿಲಾಸ್ ಪೇರಲ ತಳಿಯು 4 ತಿಂಗಳಲ್ಲಿ ಪೇರಲ ಸಸ್ಯ ಒಂದರಲ್ಲಿ ದೊಡ್ಡ ಗಾತ್ರದ 200 ಕಾಯಿಗಳನ್ನು ನೀಡಿತ್ತು. ಎಕರೆ ಒಂದರಲ್ಲಿ 750 ಪೇರಲ ಸಸ್ಯಗಳು ಇದ್ದವು. ಪ್ರಥಮ ಫಲ ತೆಗೆದುಕೊಂಡು 5 ಅಡಿ ಎತ್ತರಕ್ಕೆ ಪೇರಲ ತುದಿ ಚಿವುಟುವು (ಟಾಪಿಂಗ್) ಮಾಡುವುದರೊಂದಿಗೆ ಬದು ಟೊಂಗೆ 2 ಅಡಿ ಉದ್ದಲದಾಗ ತುದಿ ಚಿವುಟುವು (ಸೈಡ್ ಶೋಟ್ ನೀಪ್ಪಿಂಗ್) ಕಾರ್ಯ ಮಾಡಿದ್ದರು, ಹೀಗೆ ಪೇರಲ ಸಸ್ಯದ ಎತ್ತರ 5 ಅಡಿಗೆ ಸೀಮಿತ ಗೊಳಿಸಿ, ಅಗಲ 3 ಅಡಿಯಷ್ಟು ಆಗುವಂತೆ ಪೇರಲ ಸಸ್ಯ ಕುಬ್ಜಗೊಳಿಸಿದ್ದರು.

**ಹಂತ 2 :** ಸುಮರು 7 ತಿಂಗಳುಗಳ ಈ ಜಿ ವಿಲಾಸ್ ತಳಿಯ ಟೊಂಗೆಗಳಲ್ಲಿ 300 ರಷ್ಟು ಹೂವು ಕಾಯಿಗಳಗಿ 8 ತಿಂಗಳ ಅವಧಿಯಲ್ಲಿ ವರುಷದಲ್ಲಿ 2 ನೇಯ ಬಾರಿ 300 ಸಂಖ್ಯೆಯಲ್ಲಿ ಅತಿ ದೊಡ್ಡ ಗಾತ್ರದ ಪೇರಲ ಹಣ್ಣುಗಳು ಲಭಿಸಿದ್ದವು. ಗೊಂಚಲು ಗೊಂಚಲಾದ ಪೇರಲ ನೋಡಲು ತುಂಬಾ ಆಕರ್ಷಕವಾಗಿತ್ತು.

**ಹಂತ 3 :** ಇದೇ ರೀತಿ ಮತ್ತೆ ಟಾಪ್ಪಿಂಗ್ ಹಾಗೂ ಸೈಡ್ ಶೋಟ್ ನಿಪ್ಪಿಂಗ್ ಮಾಡುವ ಈ 3ನೇ ಕ್ರಮ ಪೂರ್ತಿಗೊಂಡು ಬಲವಾಗಿ ಬೆಳೆದ ಪೇರಲ ಸಸ್ಯ ಒಂದರಿಂದ 12ನೇ ತಿಂಗಳಲ್ಲಿ 400 ರಷ್ಟು ಪೇರಲ ಕಾಯಿ ಇಳುವರಿ ಬಂದಿತ್ತು. ಈ ಗಾತ್ರ ಕೂಡ ಅತಿ ದೊಡ್ಡದಾಗಿತ್ತು. ಹೀಗೆ ವರ್ಷದಲ್ಲಿ ಒಂದು ಸಸ್ಯದಿಂದ 900-1000 ಕಾಯಿಗಳು ದೊರಕಿದವು.

ಈ ಜಿವಿಲಾಸ್ ಪೇರಲ ತಾಂತ್ರಿಕತೆ ವೀಕ್ಷಿಸಲು ದೂರ ದೂರಿನ ಕೃಷಿಕರ ತಂಡಗಳು ಕುರಣಿವಾಡಿಗೆ ಗೋಪಾಲ್ ಪೂಜಾರಿಯನ್ನು ಕಾಣಲು ಬಂದರು. ಪೇರಲದಲ್ಲಿ ಆದ ಈ ಕ್ರಾಂತಿಕಾರಕ ದಾಖಲೆ ಇಳುವರಿ ದೊಡ್ಡ ಗಾತ್ರದ ಈ ಹಣ್ಣುಗಳನ್ನು ಸಮೀಪದ ರೈಲು ನಿಲ್ದಾಣಗಳ ಹಮಾಲರು ಕೂಡ ವೀಕ್ಷಿಸಿದರು. ಗೋಪಾಲ್ ಪೂಜಾರಿಯವರ ಪೇರಲ ಹಣ್ಣುಗಳಿಗೆ ಪುಣೆ, ಮುಬೈ ಕಡೆಗಳಿಂದ ಮಾರುಕಟ್ಟೆ ದೊರಕಿತ್ತು. 8 ಎಕರೆ ಕ್ಷೇತ್ರದಲ್ಲಿ ಬೆಳೆದ ಜಿ ವಿಲಾಸ್ ಪೇರಲ ತಳಿ ಒಂದು ಕಿಲೋ ತೂಕದ ದರ ಕೇವಲ 25 ರೂಪಾಯಿಗಳಷ್ಟು ಆಗಿತ್ತು .

ಸದ್ಯದಲ್ಲಿ ಈ ಜಿ ವಿಲಾಸ್ ತಳಿಯ ತಾಂತ್ರಿಕತೆ ಜನಪ್ರಿಯವಾಗಿದೆ ಹಾಗೂ ನಿವೃತ್ತ ಕುಲಪತಿ ಡಾ. ದಂಡಿನರವರು ಹೇಳುವಂತೆ ವರುಷದಲ್ಲಿ 2 ಬೇಳೆ ಪೇರಲ ತೆಗೆಯುವದು ಸೂಕ್ತ. ಅಲ್ಲದೇ 10x5 ಅಡಿ (750 ಸಸ್ಯಗಳು) ಅಂತರ ಅತ್ಯುತ್ತಮ ಎಂದಿದ್ದರು.

ಪ್ರಾತ್ಯಕ್ಷಿಕೆ 2 : ಧಾರವಾಡ ಹತ್ತಿರದ ಹೊನ್ನಾಪುರ ಕೃಷಿಕ ಬಸವರಾಜ್ ವಿಭುತಿಯವರು 2018ರಲ್ಲಿ ಗೋಪಾಲ್ ಪೂಜಾರಿಯವರಿಂದ 3 ಎಕರೆಗಾಗಿ ಜಿ ವಿಲಾಸ್ ಪೇರಲ ತಳಿಯನ್ನು ಖರೀದಿಸಿ, ತಂದು ತಮ್ಮ ಹೊಲದಲ್ಲಿ 10x5 ಅಡಿ ಅರ್ಧ ಎಕರೆಯಲ್ಲಿ ಬೆಳೆದು ಇನ್ನುಳಿದ ಕ್ಷೇತ್ರದಲ್ಲಿ 5x5 ಅಡಿ (1500 ಸಸ್ಯ) ಅಂತರವಿಟ್ಟು 12 ತಿಂಗಳ ಅವಧಿಯಲ್ಲಿ ಎಕರೆಗೆ 25 ಟನ್ ಅಷ್ಟು ಇಳುವರಿ ಪಡೆದಿರುವರು. ಪೇರಲ ಸಸ್ಯದಲ್ಲಿ ಅಪಾರ ಪ್ರಮಾಣದಲ್ಲಿ ಪೇರಲ ಎಲೆಗಳೂ ಗುಚ್ಛ ಗುಚ್ಛವಾಗಿ ಬರುವುದನ್ನು ತೆಗೆದು ಅದರ ಪುಡಿಯನ್ನು ಮಾಡಿ, ಪೇರಲ ಎಲೆಯ ಚೂರ್ಣವನ್ನು ಸಿದ್ದ ಪಡಿಸಿರುವವರು. ಆಯುರ್ವೇದ ತಜ್ಞರ ಸಲಹೆಯ ಪ್ರಕಾರ ಇನ್ನೂ ಹಲವಾರು ಸಸ್ಯಗಳ ಎಲೆಗಳನ್ನು ಚೆನ್ನಾಗಿ ಬೇರೆಸಿ ಈ ಚೂರ್ಣವನ್ನು ಸಿದ್ದಪಡಿಸಿ, 50 ಗ್ರಾಂ ಚುರ್ಣದ ಡಬ್ಬಿಗೆ 60 ರೂಪಾಯಿ ಬೆಲೆ ನಿಗದಿ ಪಡಿಸಿದ್ದಾರೆ. ಈ ಇಬ್ಬರು ಪೇರಲ ಕೃಷಿಕರನ್ನು ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಡಾ. ಇಂದರೇಶ್ ಅವರು ತಮ್ಮ ತೋಟಗಾರಿಕಾ ಮೇಳಕ್ಕೆ ಆಮಂತ್ರಿಸಿ, 3 ಜನವರಿ 2021 ರಂದು ಸನ್ಮಾನಿಸಿದ್ದಾರೆ. ಅವರು ವಿಡಿಯೋ ದೃಷ್ಯೀಕರಣ ಮಾಡಿಕೊಂಡಿದ್ದನ್ನು ಮೇಳದಲ್ಲಿ ನಾಡಿನ ಎಲ್ಲಾ ರೈತರಿಗೆ ಪರಿಚಯಿಸಿದ್ದಾರೆ.

**ಲೇಖಕರ ಪರಿಚಯ :** ಕೃಷಿ ವಿಜ್ಞಾನಿ ಪ್ರೊ. ವಿಜಯ್‌ಕುಮಾರ್ ಗಿಡ್‌ನವರ್ ಅವರು, ರೈತರ ಹಿತ ದೃಷ್ಟಿಯಿಂದ 1966 ರಿಂದಲು ರೈತರ ಹೊಲಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ನೆರವೇರಿಸುತ್ತಾ, ಅತ್ಯುತ್ತಮ ಕೃಷಿ ಸಾದಕರುಗಳಿಗೆ ಕೃಷಿ ಪ್ರಶಸ್ತಿ ಪುರಸ್ಕಾರಗಳನ್ನೂ ನಿಡಿಸುವಲ್ಲಿ ಅವರ ಸಾಧನೆಗಳನ್ನು ಲೇಖನ ಮೂಲಕ ಪ್ರಕಟಿಸುತ್ತಿರುವರು.

**ರೈತರ ಸಂಪರ್ಕ : ಬಸವರಾಜು ವಿಭೂತಿ, 9448492359**
**ಗೋಪಾಲ್ ಪೂಜಾರಿ, 9590958644**

## ಸಿರಿಹರಿಯ ದಯವಾಗಲಿ

ಅಂತ್ಯವೇ ಇಲ್ಲದ ಅಂತರಾತ್ಮನೇ
ಅಂತೆ ಕಂತೆಗಳ ಕೇಳಿಸದಿರು
ಅಂತಕನ ಮರೆಯದಂತೆನ್ನ ಎಚ್ಚರಿಸು
ಅಂತರಂಗವ ಸದಾ ತಿಳಿಯಾಗಿಸು

ಚಿಂತೆಗಳು ಬರಲಿ ಅಚಿಂತ್ಯ ನೆನಪಾಗಲಿ
ಚಿಂತನೆಯು ಬರಲಿ ಸಂಚಿತ ಕಳೆಯಲಿ
ಚಿಂತಿಸಿ ಮನದಲ್ಲಿ ಮಂಥನವು ಆಗಲಿ
ಚಿಂತಾಮಣಿ ಹರಿಯ ಅರಿವಾಗಲಿ

ಸಂತತ ಆನಂದ ಉತ್ಸಾಹ ಹೆಚ್ಚಲಿ
ಸಂತರ ಕೃಪೆ ಸೇವೆ ಭಾಗ್ಯ ಸಿಗಲಿ
ಸಂತೋಷ ಭರಿತ ಹೂವಂತಿರಲಿ
ಸಾಂತ್ವನದ ಘಮವ ಹರಡುತಿರಲಿ

ಕಾಂತಿಯುತ ಸಿರಿಹರಿ ಕಣ್ಣಿಗೆ ಕಾಣಲಿ
ಕಾಂತೆ ಲಕ್ಷ್ಮಿಯ ಕೂಡೆ ಮನದಲಿರಲಿ
ಕಂತುಪಿತನಂಘ್ರಿಗಳ ದಾಸತ್ವ ದೊರಕಲಿ ಶ್ರೀ
ಕಾಂತ ಸಿರಿಹರಿಯ ದಯವಾಗಲಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಕ್ಷಮಾದಾನಕ್ಕೆ ಚರ್ಚೆ

(1ನೇ ಪುಟದಿಂದ) ರಾಜಕೀಯ ಪರಿಣಾಮಗಳ ಕುರಿತು ಚರ್ಚಿಸುತ್ತಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

2018ರಲ್ಲಿ ತನ್ನ ಹಲವಾರು ರಾಜಕೀಯ ಮಿತ್ರ ರಿಗೆ ಕ್ಷಮಾದಾನ ನೀಡಿದ್ದ ಟ್ರಂಪ್, ನನಗೆ ನಾನೇ ಕ್ಷಮಾ ದಾನ ಮಾಡಿಕೊಳ್ಳುವ ಹಕ್ಕಿದೆ ಎಂದು ತಿಳಿಸಿದ್ದರು. ಅಮೆರಿಕದಲ್ಲಿ ಇದುವರೆಗೂ ಯಾರೂ ಸ್ವಯಂ ಕ್ಷಮಾದಾನ ಮಾಡಿಕೊಂಡಿಲ್ಲ. ಈ ರೀತಿಯ ಕ್ರಮದ ಸಂವಿಧಾನಿಕ ಸಿಂಧುತ್ವದ ಬಗ್ಗೆ ಒಡಕಿನ ಅಭಿಪ್ರಾಯಗಳಿವೆ. ಟ್ರಂಪ್ ತಮಗಷ್ಟೇ ಅಲ್ಲದೇ, ತಮ್ಮ ಮಗಳು ಇವಾಂಕಾ ಟ್ರಂಪ್, ಮಕ್ಕಳಾದ ಎರಿಕ್ ಹಾಗೂ ಡೊನಾಲ್ಡ್ ಟ್ರಂಪ್ ಜ್ಯೂನಿಯರ್ ಮತ್ತು ಸಹಚರರಿಗೆ ಕ್ಷಮಾದಾನ ನೀಡಲು ಪರಿಶೀಲಿಸುತ್ತಿದ್ದಾರೆ ಎಂದು ವರದಿಗಳು ತಿಳಿಸಿವೆ.

## ಸೇವಾ ಭದ್ರತೆಗಾಗಿ ಅತಿಥಿ ಉಪನ್ಯಾಸಕರ ಆಗ್ರಹ

ದಾವಣಗೆರೆ, ಜ.8- ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡುವಂತೆ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ರಾಜ್ಯಾಧ್ಯಕ್ಷ ಹೆಚ್.ಕೊಟ್ರೇಶ್, ರಾಜ್ಯದಲ್ಲಿನ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 14447 ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಇಲ್ಲ. ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಕಾಲೇಜುಗಳನ್ನು ಆರಂಭಿಸದ ಹಿನ್ನೆಲೆಯಲ್ಲಿ ಉಪನ್ಯಾಸಕರು ತರಕಾರಿ, ಎಗ್ ರೈಸ್, ಹಣ್ಣು ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

2019-20ನೇ ಶೈಕ್ಷಣಿಕ ಸಾಲಿನಲ್ಲಿ ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರನ್ನೇ 2020-21ನೇ ಸಾಲಿಗೆ ಮುಂದುವರೆಸಿ ನೇಮಕಾತಿ ಮಾಡುವಂತೆ ಸರ್ಕಾರ ಆದೇಶಿಸಿದ್ದರೂ ಅದು ಜಾರಿಯಾಗಿಲ್ಲ. ಕೂಡಲೇ ಈ ಆದೇಶ ಜಾರಿಗೆ ತರಬೇಕು ಎಂದವರು ಒತ್ತಾಯಿಸಿದರು.

ಕೋವಿಡ್ ಮಾರ್ಗಸೂಚಿಯಂತೆ ತರಗತಿಯಲ್ಲಿ 40-45 ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಿ ಪಾಠ ಮಾಡಬೇಕಾಗಿರುವುದರಿಂದ ಹೆಚ್ಚುವರಿ ಕಾರ್ಯಭಾರಕ್ಕೆ ಹೊಸದಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳದೆ ಹಾಲಿ ಕಾರ್ಯನಿರತ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಬೇಕು.

ಪ್ರಸ್ತುತ 1242 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ರದ್ದುಪಡಿಸಿ ಈ ಹಿಂದೆ ಜೆ.ಓ.ಸಿ. ಉಪನ್ಯಾಸಕರ ಸೇವೆ ಸಕ್ರಮಗೊಳಿಸಿದಂತೆ ಅತಿಥಿ ಉಪನ್ಯಾಸಕರ ಸೇವೆ ಸಕ್ರಮಾತಿಗೆ ಕ್ರಮ ಕೈಗೊಳ್ಳಬೇಕು.

ಶೀಘ್ರ ಪ್ರಥಮ ಹಾಗೂ ದ್ವಿತೀಯ ವರ್ಷದ ಭೌತಿಕ ತರಗತಿಗಳನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ಡಾ.ಟಿ.ಜಿ. ಮಲ್ಲಿಕಾರ್ಜುನ್ ಮಾತನಾಡಿ, ರಾಜ್ಯದ ಬೇರೆ ವಿವಿಗಳಲ್ಲಿ ಈಗಾಗಲೇ ತರಗತಿಗಳು ಆರಂಭವಾಗಿದ್ದು, ದಾವಣಗೆರೆ ವಿವಿಯಲ್ಲಿ ಮಾತ್ರ ತರಗತಿಗಳನ್ನು ಆರಂಭಿಸದೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಪಿ.ವಿ. ಸಿದ್ದಮ್ಮ, ಅತಿಥಿ ಉಪನ್ಯಾಸಕರಲ್ಲಿ ಮಹಿಳೆಯರೇ ಹೆಚ್ಚಾಗಿದ್ದು, ಹೆರಿಗೆ ಭತ್ಯೆ, ರಜೆ ಸೌಲಭ್ಯ ಇಲ್ಲವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎ.ಓಬಳೇಶ, ಎ.ಆರ್. ಸತೀಶ್, ಗಂಗಾಧರ ಮೂರ್ತಿ, ಹೆಚ್.ನಿಂಗಪ್ಪ, ಎಂ.ಪ್ರಭಾಕರ್ ಹಾಗು ಇತರರು ಉಪಸ್ಥಿತರಿದ್ದರು.


## ಸಕಾಲದಿಂದ ವಿಕಲ ಚೇತನರಿಗೆ ರಿಯಾಯಿತಿಯಲ್ಲಿ ಬಸ್‌ಪಾಸ್

ದಾವಣಗೆರೆ, ಜ.8- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 6 ಸೇವೆಗಳನ್ನು ವಿದ್ಯಾರ್ಥಿ ಉಚಿತ/ರಿಯಾಯಿತಿ ಬಸ್‌ಪಾಸ್, ವಿಕಲಚೇತನರ ರಿಯಾಯಿತಿ ಪಾಸ್, ಅಂಧರ ಉಚಿತ ಪಾಸ್, ಸ್ವಾತಂತ್ರ್ಯ ಹೋರಾಟಗಾರರ ಪಾಸ್‌ಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಆನ್‌ಲೈನ್ ವ್ಯವಸ್ಥೆಯಡಿ ನಿರ್ವಹಿಸಲಾಗುತ್ತಿದೆ.

ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್ ವಿತರಣೆ ಮಾಡಬೇಕಾಗಿರುವುದರಿಂದ ಫಲಾನುಭವಿಗಳು ನವೀಕರಿಸಿಕೊಳ್ಳಲು ಮತ್ತು ಹೊಸ ಪಾಸ್‌ಗಳನ್ನು ಪಡೆದುಕೊಳ್ಳಲು ಸೇವಾ ಸಿಂಧು ಪೋರ್ಟಲ್ http://serviceonline.gov.in/karnataka ನಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ.

ಈ ವಿಕಲಚೇತನರ ಫಲಾನುಭವಿಗಳು ಬರುವ ಫೆಬ್ರವರಿ 28 ರೊಳಗಾಗಿ ನವೀಕರಣ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಆನ್‌ಲೈನ್‌ನಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ. ಫಲಾನುಭವಿಗಳು ಆನ್‌ಲೈನ್ ಮುಖಾಂತರ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿದ್ದಾಗ್ಯೂ ಭೌತಿಕವಾಗಿ ಪಾಸ್ ಪಡೆಯಲು ಬಂದಾಗ ಅಗತ್ಯ ದಾಖಲಾತಿಗಳು ಮತ್ತು ಮೂಲ ದಾಖಲೆಗಳು ಹಾಗೂ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿ ವಿಕಲಚೇತನರ (ಹೊಸ/ನವೀಕರಣ)ಪಾಸ್‌ಗಳನ್ನು ಪಡೆಯಬೇಕೆಂದು ದಾವಣಗೆರೆ ಕ.ರಾ.ರ.ಸಾ.ನಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಶ್ರೀ ದತ್ತಾತ್ರೇಯ ಜಯಂತೋತ್ಸವದ ಸರಳ ಆಚರಣೆ



ಹರಪನಹಳ್ಳಿ, ಜ.8 - ಪಟ್ಟಣದ ಶಂಕಮಠದಲ್ಲಿ ಶ್ರೀ ದತ್ತಾತ್ರೇಯ ಜಯಂತ್ಯೋತ್ಸವವನ್ನು ಕೊರೊನಾ ಭೀತಿಯಿಂದ ಸರಳವಾಗಿ ಆಚರಣೆ ಮಾಡಲಾಯಿತು.

ರಥೋತ್ಸವ ಇಲ್ಲದೇ ವೇದ ಮಂತ್ರಗಳ ಪಠಣ, ಪಲ್ಲಕ್ಕಿ ಉತ್ಸವ, ರುದ್ರಾಭಿಷೇಕಗಳೊಂದಿಗೆ ಜಯಂತಿಯನ್ನು ಆಚರಿಸಲಾಯಿತು. ಸಂಜೆ ವೇಳೆ ಅಷ್ಟಾವಧಾನ ಆರ್ಯಾಂಬಾ ಭಜನಾ ಮಂಡಳಿಯಿಂದ ಭಜನೆ. ನಂದಿಬೇವೂರು ಶ್ರೀಧರ ಶಾಸ್ತ್ರಿಗಳ ಮನೆಯವರಿಂದ ಪ್ರಸಾದ ವಿತರಣೆ ನಡೆಯಿತು

ಕಡಬಗೇರಿಯ ಗೀತಾ ರಘುನಾಥ ಅವರು ಬೆಳ್ಳಿ ಪಂಚಾರತಿಯನ್ನು ಶಂಕರ ಮಠಕ್ಕೆ ಅರ್ಪಿಸಿದರು. ಸಕಲ ಭಕ್ತರಿಗೆ ತ್ರಿಮೂರ್ತಿ ರೂಪ ಶ್ರೀ ದತ್ತಾತ್ರೇಯ ಮುಕ್ತ ಆರೋಗ್ಯ ದಯಪಾಲಿಸಲಿ ಎಂದು ಶ್ರೀದತ್ತ ಸೇವಾ ಸಮಿತಿಯವರು ಪ್ರಾರ್ಥಿಸಿದರು.

## ಪೋಷಕರೇ ಫೈರ್‌ಗೇಮ್ ಬಗ್ಗೆ ಎಚ್ಚರ ವಹಿಸಿ




ದಾವಣಗೆರೆ, ಜ.8- ಆನ್‌ಲೈನ್ ತರಗತಿ ಎಂದು ಮಕ್ಕಳ ಕೈಗೆ ಮೊಬೈಲ್ ಕೊಡುವ ಪೋಷಕರು, ಮಕ್ಕಳ ಮೇಲೆ ನಿಗಾ ವಹಿಸುವುದು ಅತ್ಯಗತ್ಯವಾಗಿದೆ.

ಇತ್ತೀಚೆಗೆ ಕೆಲ ವಿದ್ಯಾರ್ಥಿಗಳು ಫ್ರೀ ಫೈರ್ ಗೇಮ್ ಆಟಕ್ಕೆ ಮನಸೋತು ಹಣ ಕಳೆದುಕೊಳ್ಳಲಾರಂಭಿಸಿದ್ದಾರೆ. ಆಟದ ಚಟ ಹತ್ತಿಸಿಕೊಂಡವರು ಗೇಮ್ ಮುಂದುವರೆಸಲು ಹಣ ಬೇಕಾದಾಗ ಕಳ್ಳತನ ಮಾಡಿ ಸಿಕ್ಕಿಬಿದ್ದ ಘಟನೆಗಳೂ ನಗರದಲ್ಲಿ ನಡೆದಿವೆ.

ಹೌದು, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಸಿಗುವ ಫ್ರೀ ಫೈರ್ ಗೇಮ್ ಇತ್ತೀಚಿನ ದಿನಗಳಲ್ಲಿ ಮಕ್ಕಳ ಫೇವರಿಟ್ ಗೇಮ್ ಆಗುತ್ತಿದೆ. ಆರಂಭದಲ್ಲಿ ಆಟ ಉಚಿತವಾಗಿದ್ದರೂ ನಂತರ ಆಟ ಮುಂದುವರೆಸಲು ಹಣ ಕಳೆದುಕೊಳ್ಳಬೇಕಾಗುತ್ತದೆ.

ಈ ಮೊಬೈಲ್ ಆಟದಲ್ಲಿ ರೀಡಿಮ್ ಕೋಡ್ ಖರೀದಿಸಿದರೆ ಸಿಗುವ ಪಾಯಿಂಟ್‌ಗಳ ಮೂಲಕ ಆಟ ಮುಂದುವರೆಯುತ್ತದೆ. ಇದಕ್ಕಾಗಿ ಮಕ್ಕಳು ಹಣಕ್ಕಾಗಿ ಪೋಷಕರಿಗೆ ದುಂಬಾಲು ಬೀಳುತ್ತಿದ್ದಾರೆ. ಪೋಷಕರಿಗೆ ಗೊತ್ತಾಗದಂತೆ ಆಟವಾಡುವ ಮಕ್ಕಳು ಅವರಿಗೆ ಗೊತ್ತಾಗದಂತೆಯೇ ಹಣ ಜೋಡಿಸಲು ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ ಪೋಷಕರು ನಿಗಾ ವಹಿಸಬೇಕಿದೆ ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್.

ಮೊಬೈಲ್‌ನಲ್ಲಿ ಫೋನ್ ಪೇ, ಗೂಗಲ್ ಪೇ ಅಂತಹ ಆಪ್‌ಗಳ ಮೂಲಕವೂ ಗೇಮ್‌ಗೆ ಬೇಕಾದ ರೀಡಿಮ್ ಕೋಡ್ ಖರೀದಿಸಬಹುದಾಗಿದೆ. ಮಕ್ಕಳಿಗೆ ಈ ಆಪ್‌ಗಳ ಪಾಸ್‌ವರ್ಡ್ ತಿಳಿದಿದ್ದರೆ ನಿಮ್ಮ ಅಕೌಂಟ್‌ನಲ್ಲಿ ಹಣ ಖಾಲಿಯಾದಂತೆಯೇ ಸರಿ.

**ರೀಡಿಂ ಕೋಡ್ ರೀಚಾರ್ಜ್ :** ಮೊಬೈಲ್‌ಗೆ ರೀಚಾರ್ಜ್ ಮಾಡಿಸಿದಂತೆ ಈ ರೀಡಿಮ್ ಕೋಡ್‌ಗಳ ರೀಚಾರ್ಜ್ ಸಹ ಮಾಡಲಾಗುತ್ತಿದೆ. ಕೆಲ ಮೊಬೈಲ್ ಅಂಗಡಿ ಮಾಲೀಕರು ಮಕ್ಕಳು ಕೇಳಿದಾಕ್ಷಣ ಈ ಕೋಡ್ ರೀಚಾರ್ಜ್ ಮಾಡಿಕೊಡುತ್ತಾರೆ. 80 ರಿಂದ 4 ಸಾವಿರ ರೂ.ಗಳ ವರೆಗೆ ಹಣ ನೀಡಿ ಮಕ್ಕಳು ಕೋಡ್ ಖರೀದಿಗೆ ಮುಂದಾಗುತ್ತಿದ್ದಾರೆ.

ಇಂತಹ ರೀಡಿಮ್ ಕೋಡ್ ಪಡೆಯಲು ಮಕ್ಕಳು ಮುಂದಾದಾಗ ಅಂಗಡಿ ಮಾಲೀಕರು ತುಸು ವಿಚಾರಿಸಬೇಕಿದೆ. ಮಕ್ಕಳ ಪೋಷಕರಿಗೆ ಕರೆ ಮಾಡಿ ಈ ಬಗ್ಗೆ ತಿಳಿಸಬೇಕಿದೆ. ಇದರಿಂದ ಮಕ್ಕಳು ಅಡ್ಡ ದಾರಿ ಹಿಡಿಯುವುದು ತಪ್ಪುತ್ತವೆ. ಪರವಾನಗಿ ಪಡೆಯದ ಕೆಲ ಗೇಮ್ ಸೆಂಟರ್‌ಗಳೂ ಸಹ ಈ ಆಟಕ್ಕೆ ಅನುವು ಮಾಡಿಕೊಡುತ್ತಿವೆ. ಈ ಬಗ್ಗೆ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಮುಂದೊಂದು ದಿನ ಬಾಲ ಅಪರಾಧ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಎಂ.ಜಿ. ಶ್ರೀಕಾಂತ್ ಕಳವಳ ವ್ಯಕ್ತಪಡಿಸಿದರು.

ಶಿಕ್ಷಣ ಇಲಾಖೆ ಅಧಿಕಾರಿಗಳೂ ಸಹ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಈ ಬಗ್ಗೆ ಜಾಗೃತಿ ನೀಡಿಸಲು ಮುಂದಾಗಬೇಕಿದೆ. ಈಗಾಗಲೇ ರೀಡಿಮ್ ಕೋಡ್ ರೀಚಾರ್ಜ್ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಲು ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದೇವೆ. ಮಕ್ಕಳ ಆಯೋಗಕ್ಕೂ ದೂರು ನೀಡಿದ್ದೇವೆ ಎಂದು ಶ್ರೀಕಾಂತ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ವಿಂಡೋಸ್ ಕಂಪ್ಯೂಟರ್ ಸೆಂಟರ್ ಮಾಲೀಕ ಇ.ಬಸವರಾಜ್ ಉಪಸ್ಥಿತರಿದ್ದರು.

## ಸುಸ್ಥಿರ ಅಭಿವೃದ್ಧಿಗೆ ಕಾರ್ಯಯೋಜನೆ : ಯಡಿಯೂರಪ್ಪ

ಬೆಂಗಳೂರು, ಜ. 8 - ರಾಜ್ಯದ ಎಲ್ಲಾ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು 2030 ರೊಳಗೆ ಸೂಕ್ತ ಕಾರ್ಯಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಪ್ರಸಕ್ತ ಸಾಲಿನ ಮೊದಲ ಯೋಜನಾ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, ಸುಸ್ಥಿರ ಅಭಿವೃದ್ಧಿಯಲ್ಲಿ ಕರ್ನಾಟಕ 100ಕ್ಕೆ 66 ಅಂಕಗಳೊಂದಿಗೆ ದೇಶದಲ್ಲಿ 6 ನೇ ಸ್ಥಾನದಲ್ಲಿದೆ ಎಂದರು.

ಬಡತನ ಮುಕ್ತ, ಹಸಿವು ಮುಕ್ತ, ಲಿಂಗ ಸಮಾನತೆ, ಕೈಗಾರಿಕೆ, ನಾವೀನ್ಯತೆ ಮತ್ತು ಮೂಲಸೌಕರ್ಯ ಹಾಗೂ ಸುಸ್ಥಿರ ನಗರಗಳು ಮತ್ತು ಸಮುದಾಯ - ಈ ಆರೂ ಗುರಿಗಳಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಬೇಕಿದ್ದು, ವಿಷಯವಾರು ತಜ್ಞರ ಅಧ್ಯಯನ ಮತ್ತು ಸಲಹೆ ಆಧರಿಸಿ ರಾಜ್ಯ ಯೋಜನಾ ಮಂಡಳಿ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಸಭೆಯಲ್ಲಿ, ಕರ್ನಾಟಕ ರಾಜ್ಯ ಯೋಜನಾ ಮಂಡಳಿಯನ್ನು 'ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗ' ಎಂದು ಮರುನಾಮಕರಣ ಮಾಡಲು ತೀರ್ಮಾನಿಸಲಾಯಿತು.

ಐದು ತಾಂತ್ರಿಕ ವಿಭಾಗಗಳಿಗೆ ಅನುಮೋದನೆ ಹಾಗೂ ಯೋಜನಾ ಮಂಡಳಿಯಲ್ಲಿ 2 ರೀಸರ್ಚ್ ಆಫೀಸರ್ ಹುದ್ದೆಗಳು ಇದ್ದು, ಹೆಚ್ಚುವರಿಯಾಗಿ 3 ರಿಸರ್ಚ್ ಆಫೀಸರ್ ಹುದ್ದೆಗಳ ಮಂಜೂರಾತಿಗೆ ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೈಗೊಂಡ ಇತರೆ ನಿರ್ಣಯಗಳಲ್ಲಿ ಪ್ರಾದೇಶಿಕ ಸಮತೋಲನೆಗೆ ಸರಾಸರಿಗಿಂತ ಕಡಿಮೆ ಇರುವ ತಾಲ್ಲೂಕುಗಳಿಗೆ ಹೆಚ್ಚಿನ ಒತ್ತು ನೀಡುವುದು, ಬಡವರಿಗೆ ಎಲ್ಲಾ ರಾಜ್ಯ ಸೌಲಭ್ಯಗಳನ್ನು ಒದಗಿಸಲು ಏಕಗವಾಕ್ಷಿ ವ್ಯವಸ್ಥೆ. ಇದರಡಿ ಪಡಿತರ ಚೀಟಿ, 3-6 ವಯೋಮಾನದ ಮಕ್ಕಳಿಗೆ ಮನೆಗೆ ಆಹಾರ ವಸ್ತುಗಳ ಪೂರೈಕೆ, ಮಾತೃಪೂರ್ಣ ಯೋಜನೆ, ಮಾತೃ ವಂದನಾ ಯೋಜನೆ, ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಊಟ, ತಾಯಿ ಚೀಟಿ, ಆಯುಷ್ಮಾನ್ ಭಾರತ ಆರೋಗ್ಯ ಚೀಟಿ, ವೃದ್ಧಾಪ್ಯ ವೇತನ, ವಿಧವಾ ವೇತನ, ಕಾರ್ಮಿಕ ಚೀಟಿ, ಹಿರಿಯ ನಾಗರಿಕರ ಚೀಟಿ, ಮೈತ್ರಿ, ಮನಸ್ವಿನಿ, ವಸತಿ ಯೋಜನೆಗಳ ಸೌಲಭ್ಯಗಳನ್ನು ಒದಗಿಸುವುದು ಸೇರಿದೆ.

ಜಿಲ್ಲಾ ಯೋಜನಾ ಸಮಿತಿಗಳನ್ನು 'ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ'ದೊಂದಿಗೆ ಸಮೀಕರಿಸುವುದು, ಗ್ರಾಮಮಟ್ಟದ 'ಗ್ರಾಮ ಅಭಿವೃದ್ಧಿ ಯೋಜನೆ' ತಯಾರಿಸುವುದು, ಆದಿವಾಸಿ ಬುಡಕಟ್ಟು ಜನಾಂಗದ ಅಭಿವೃದ್ಧಿ ಯೋಜನೆಗೆ 600 ಕೋಟಿ ರೂ.ಗಳ ಅನುದಾನ ಒದಗಿಸುವುದು ಸೇರಿದೆ.

2021-22ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆಯಲ್ಲಿ ಯೋಜನೆಗಳ ಸಮೀಕರಣ ಹಾಗೂ ಸಮೀಕ್ಷೆ ತೆಗೆದುಕೊಳ್ಳುವುದು ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಆದಾಯ ವೃದ್ಧಿ ವಿಧಾನಗಳ ಕುರಿತು ಯೋಜನೆ ರೂಪಿಸುವುದು ಸೇರಿದೆ.

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ 'ಎಸ್.ಡಿ.ಜಿ. ಔಟ್‌ರೀಚ್ ಸೆಂಟರ್' ಸ್ಥಾಪಿಸುವುದು, ಬೆಂಗಳೂರಿನಲ್ಲಿ ಕರ್ನಾಟಕ ವಿಜ್ಞಾನ ನಗರವನ್ನು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸುವುದು ಸೇರಿದೆ.

ಆಯವ್ಯಯದಲ್ಲಿ ಯೋಜನೆಗಳಿಗೆ ನಿಗದಿಪಡಿಸಿದ ಒಟ್ಟು ಅನುದಾನಕ್ಕೆ ಶೇ.1ರಷ್ಟು ಕರ್ನಾಟಕ ಇನ್ನೋವೇಷನ್ ಕಾರ್ಯಕ್ರಮಗಳಿಗೆ ಒದಗಿಸುವುದು, ಜಿಲ್ಲಾ ಯೋಜನಾ ವಿಭಾಗವನ್ನು'ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ' ವ್ಯಾಪ್ತಿಗೆ ತರುವುದು, ನೀತಿ ಆಯೋಗದಂತೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗದ' ವ್ಯಾಪ್ತಿಗೆ ತರುವುದು ಇತ್ಯಾದಿ ನಿರ್ಣಯಗಳು ಸೇರಿವೆ.


# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 19-01-2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 19-01-2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಸವಳಂಗ, ಹೊನ್ನಾಳಿ ತಾಲ್ಲೂಕು, ಫೋನ್ : 08188-244544 ಮೊ: 9449132737**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ದೇವೇಂದ್ರನಾಯ್ಕ ಬಿನ್. ಪೀರ್‍ಯಾನಾಯ್ಕ, ಸೂರಗೊಂಡನಕೊಪ್ಪ | 99015302004415 | 90,011-00 |
| 2 | ಶ್ರೀ ದೇವೇಂದ್ರನಾಯ್ಕ ಬಿನ್. ಪೀರ್‍ಯಾನಾಯ್ಕ, ಸೂರಗೊಂಡನಕೊಪ್ಪ | 99015302004515 | 40,673-00 |
| 3 | ಶ್ರೀ ರವಿ ಸಿ. ಬಿನ್. ಚಂದ್ರಪ್ಪ, ಇಂದಿರಾ ಕಾಲೋನಿ, ಸವಳಂಗ | 99015302012115 | 16,174-00 |
| 4 | ಶ್ರೀ ಆನಂದಪ್ಪ ಬಿನ್. ನಾಗಪ್ಪ, ಕೊಡತಾಳು, ಸವಳಂಗ | 99015302028417 | 54,092-00 |
| 5 | ಶ್ರೀ ವೇಲು ಸಿ.ಆರ್. ಬಿನ್. ರಾಮಸ್ವಾಮಿ, ಚಿನ್ನಿಕಟ್ಟೆ | 99015302003818 | 26,858-00 |
| 6 | ಶ್ರೀ ಮಹೇಶ್ವರಪ್ಪ ಎಂ. ಬಿನ್. ಈಶ್ವರಪ್ಪ, ಕೊಡತಾಳು, ಸವಳಂಗ | 99015302034718 | 24,820-00 |
| 7 | ಶ್ರೀ ಅರ್ಜುನ್‌ನಾಯ್ಕ ಬಿನ್. ಪೀರ್‍ಯಾನಾಯ್ಕ, ಸೋಗಿಲು, ಸವಳಂಗ | 99015302002219 | 49,251-00 |
| 8 | ಶ್ರೀ ಅರ್ಜುನ್‌ನಾಯ್ಕ ಬಿನ್. ಪೀರ್‍ಯಾನಾಯ್ಕ, ಸೋಗಿಲು, ಸವಳಂಗ | 40990301013319 | 56,262-00 |

**ಶಾಖೆ: ಅರಸೀಕೆರೆ, ಹರಪನಹಳ್ಳಿ ತಾಲ್ಲೂಕು, ಫೋನ್ : 08398-270094 ಮೊ: 9963490062**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ರೇವಣಸಿದ್ದಪ್ಪ ಬಿನ್. ಸಣ್ಣಸಿದ್ದಪ್ಪ, ಅರಸೀಕೆರೆ | 52315302041618 | 25,105-00 |
| 2 | ಶ್ರೀ ಕೊಟ್ರೇಶ್ ಎಸ್. ಬಿನ್. ಅಜ್ಜಪ್ಪ, ಅರಸೀಕೆರೆ | 52315302048718 | 1,00,110-00 |
| 3 | ಶ್ರೀ ಮಂಜುನಾಥ ಎಂ. ಬಿನ್. ಬಸವರಾಜಪ್ಪ, ಅರಸೀಕೆರೆ | 52315302048818 | 32,592-00 |
| 4 | ಶ್ರೀಮತಿ ಪದ್ಮಾವತಿ ಬಿ. ಕೋಂ. ರೇವಣಸಿದ್ದಪ್ಪ, ಅರಸೀಕೆರೆ | 52315302054918 | 35,531-00 |
| 5 | ಶ್ರೀ ನಾಗರಾಜ ಜಿ. ಬಿನ್. ರಾಮಪ್ಪ, ಚನ್ನಾಪುರ | 52315301032514 | 3,36,743-00 |

**ಶಾಖೆ: ಚಿಗಟೇರಿ, ಹರಪನಹಳ್ಳಿ ತಾಲ್ಲೂಕು, ಫೋನ್ : 08398-274893 ಮೊ: 9483849876**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಕೊಟ್ರಪ್ಪ ಬಾಗಡಿ ಬಿನ್. ಬೆಟ್ಟಪ್ಪ, ಚಿಗಟೇರಿ | 57515301024218 | 97,768-00 |

**ಶಾಖೆ: ಹೊನ್ನಾಳಿ, ಹೊನ್ನಾಳಿ ತಾಲ್ಲೂಕು, ಫೋನ್ : 08188-251219 ಮೊ: 9844558878**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಚಿಕ್ಕಪ್ಪ ಬಿನ್. ಸಿದ್ದಪ್ಪ, ಬಸವನಹಳ್ಳಿ | 65315301024718 | 35,834-00 |

ಸ್ಥಳ : ದಾವಣಗೆರೆ
ದಿನಾಂಕ : 09-01-2021

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

# 'ಸನಾತನ ಪ್ರಗತಿಪರ' ಈ ನೆಲದಲ್ಲಿ ನಿರಂತರ

## ಸನಾತನಿಗಳು ಪ್ರಗತಿಪರರಾಗಲು ಸಾಧ್ಯವಿಲ್ಲ ಎಂಬುದು ಹುಸಿ ವಾದ

ಬಸವಕಲ್ಯಾಣದಲ್ಲಿ ನಿರ್ಮಿಸಲಾಗುತ್ತಿರುವ ನೂತನ ಅನುಭವ ಮಂಟಪದ ಜಾಹೀರಾತಿನಲ್ಲಿ 'ಸನಾತನ' ಎಂಬ ಪದದ ಬಳಕೆಗೆ ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿ ಎಂದು ಜಾಹೀರಾತುಗಳಲ್ಲಿ ಹೇಳಿರುವುದರ ಬದಲು ಶರಣರ ಚಿಂತನೆಯ ಮರುಸೃಷ್ಟಿ ಎಂದಾಗಬೇಕಿತ್ತು ಎಂದು ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದ್ದಾರೆ.

ಸನಾತನ ಧರ್ಮ ಎಂಬುದು ಹಿಂದೂ ಧರ್ಮವನ್ನು ಸೂಚಿಸುವಂಥದ್ದಾಗಿದೆ. ಹಿಂದೂ ಪದ ಬಳಕೆಗೆ ಶತಮಾನಗಳ ಮುಂಚೆಯಿಂದ ಸನಾತನ ಧರ್ಮ ಎಂಬ ಹೆಸರಿದೆ. ಸನಾತನ ಧರ್ಮ ಎಂಬ ಅಕ್ಷರಶಃ ಅರ್ಥ ಶಾಶ್ವತ ಧರ್ಮ ಎಂದಾಗಿದೆ.

ಬಸವಾದಿ ಶರಣರು ಸನಾತನ ಧರ್ಮಕ್ಕೆ ವಿರುದ್ಧವಾಗಿದ್ದ ಕಾರಣ, ನೂತನ ಅನುಭವ ಮಂಟಪದ ಜಾಹೀರಾತಿನಲ್ಲಿ ಸನಾತನ ಪದ ಇರಬಾರದಿತ್ತು ಎಂಬುದು ಕೆಲವರ ಅಭಿಪ್ರಾಯ. ಆದರೆ, ಸನಾತನ ಧರ್ಮ 12ನೇ ಶತಮಾನದಲ್ಲಿ ಶರಣರ ವಚನಗಳಿಗೆ ವಿರುದ್ಧವಾಗಿದ್ದ ರೀತಿಯಲ್ಲೇ 21ನೇ ಶತಮಾನದಲ್ಲೂ ಇದೆಯೇ? ಈ ಬಗ್ಗೆ ಗಹನವಾಗಿ ಪರಿಶೀಲಿಸಬೇಕಿದೆ.

12ನೇ ಶತಮಾನದಲ್ಲಿ ಮನುವಾದ ಇದ್ದರೆ, 21ನೇ ಶತಮಾನದಲ್ಲಿ ದಲಿತ ಸೂರ್ಯ ಬಾಬಾಸಾಹೇಬ್ ಅಂಬೇಡ್ಕರ್ ರಚಿಸಿರುವ ಸಂವಿಧಾನ ವಾದವಿದೆ. ಅಂಬೇಡ್ಕರ್ ಅವರನ್ನೇ ಆಧುನಿಕ ಮನು ಎಂದು ಸನಾತನಿಗಳು ಸ್ವೀಕರಿಸಿದ್ದಾರೆ. ದಲಿತರನ್ನು ದೂರವಿಡುವುದು 12ನೇ ಶತಮಾನವಾಗಿದ್ದರೆ, 21ನೇ ಶತಮಾನದಲ್ಲಿ ಸನಾತನ ಧರ್ಮವನ್ನು ವೈಭವೀಕರಿಸುವ ಪಕ್ಷದ ದಲಿತರೊಬ್ಬರು ರಾಷ್ಟ್ರಪತಿಯಾಗಿದ್ದಾರೆ.

ಸನಾತನ ಧರ್ಮವನ್ನು ಹೆಮ್ಮೆಯಿಂದ ಪಾಲಿಸುವ ಪ್ರಧಾನ ಮಂತ್ರಿಯೇ ಹತ್ತು ಹಲವು ಬಾರಿ ಬಸವೇಶ್ವರ, ಅನುಭವ ಮಂಟಪ ಹಾಗೂ ಶರಣರನ್ನು ಸ್ಮರಿಸಿದ್ದಾರೆ. ನೂತನ ಸಂಸತ್ ಭವನದ ನಿರ್ಮಾಣದ ಸಮಯದಲ್ಲೂ ಪ್ರಧಾನಿ ಅಚ್ಚ ಕನ್ನಡದಲ್ಲಿ ಅನುಭವ ಮಂಟಪದ ಕಾರ್ಯವೈಖರಿಯನ್ನು ಹೊಗಳಿದ್ದಾರೆ.

ರಾಜ್ಯದ ವಿಷಯಕ್ಕೆ ಬಂದಾಗ ಸನಾತನಿಗಳೇ ಲಿಂಗಾಯತ ಸಮುದಾಯದ ನಾಯಕನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರುವುದನ್ನು ಬೆಂಬಲಿಸಿದ್ದಾರೆ.

ಮೊನ್ನೆಯಷ್ಟೇ ಸುಪ್ರೀಂ ಕೋರ್ಟ್ ಹಿಂದೂ ಮಹಿಳೆಯರಿಗೆ ಪೂರ್ವಿಕರ ಆಸ್ತಿಯಲ್ಲಿ ಸಮಾನ ಹಕ್ಕಿದೆ ಎಂದು ತೀರ್ಪು ನೀಡಿದಾಗ ಸನಾತನಿಗಳು ಒಂದು ಮಾತಿನ ವಿರೋಧವಿಲ್ಲದೇ ಸ್ವೀಕರಿಸಿದ್ದಾರೆ. ಆದರೆ, ಇದೇ ಹಕ್ಕು ಅನ್ಯ ಕೆಲ ಧರ್ಮೀಯರ ಮಹಿಳೆಯರಿಗೆ ಇನ್ನೂ ದೊರೆತಿಲ್ಲ.

ಜಾತೀಯತೆಯ ವಿಷಯದಲ್ಲೂ ಸನಾತನಿಗಳನ್ನು ಟೀಕಿಸಲಾಗುತ್ತಿದೆ. 12ನೇ ಶತಮಾನದಲ್ಲಿ ರಾಜ್ಯದ ಸಂಪನ್ಮೂಲಗಳಲ್ಲಿ ದಲಿತರಿಗೆ ಹಕ್ಕಿರಲಿಲ್ಲ. ಆದರೆ, 21ನೇ ಶತಮಾನದಲ್ಲಿ ದಲಿತರಿಗೆ ಶಾಸನಾತ್ಮಕವಾಗಿ ಸಂಪನ್ಮೂಲಗಳಲ್ಲಿ ಎಸ್‌ಸಿಪಿ - ಟಿಎಸ್‌ಪಿ ಮೂಲಕ ಮೊದಲ ಆದ್ಯತೆ ನೀಡಲಾಗಿದೆ. ಸನಾತನಿಗಳೂ ಇದನ್ನೆಂದೂ ವಿರೋಧಿಸಿಲ್ಲ. ಹಾಗೆ ನೋಡಿದರೆ ಎಸ್‌ಟಿ - ಎಸ್‌ಸಿಗೆ ಸೇರಿದರೆ ಎಷ್ಟೆಲ್ಲಾ ಸೌಲಭ್ಯಗಳಿವೆ ಎಂದು ಕೆಲ ಜಾತಿಯವರು ನಾವೂ ಹಿಂದುಳಿಯುತ್ತೇವೆ ಎಂದು ಬೆನ್ನತ್ತಿದ್ದಾರೆ!

ಜಾತಿ ಎಂಬುದು ಕೇವಲ ಸನಾತನ ಧರ್ಮಕ್ಕೆ ಸೀಮಿತವಲ್ಲ. ಅದೊಂದು ಭಾರತೀಯ ಉಪಖಂಡದ ಸಾಮಾಜಿಕ ವ್ಯವಸ್ಥೆ. ಉಪಖಂಡದಲ್ಲಿ ಜನಿಸಿದ ಧರ್ಮಗಳಷ್ಟೇ ಅಲ್ಲದೇ, ಹೊರಗಿನಿಂದ ಬಂದ ಧರ್ಮೀಯರಲ್ಲೂ ಜಾತಿಗಳು ಸೇರಿಕೊಂಡಿವೆ. ಇಷ್ಟಾದರೂ ಸನಾತನಿಗಳು ಮಾತ್ರ ಜಾತಿವಾದಿಗಳು ಎಂದು ಬಿಂಬಿಸುವುದು ತಪ್ಪು ದಾರಿಗೆಳೆಯುವ ಪ್ರಯತ್ನ.

ಸನಾತನಿಗಳು ಪ್ರಗತಿಪರರಾಗಲು ಸಾಧ್ಯವಿಲ್ಲ ಎಂಬುದು ಹುಸಿ ವಾದ. 21ನೇ ಶತಮಾನದಲ್ಲಿ ಸನಾತನಿಗಳು ಕಂಡಿರುವ ಅಭೂತಪೂರ್ವ ಬದಲಾವಣೆಯನ್ನು ಗಮನಿಸಿದಾಗ ಸನಾತನ ಪ್ರಗತಿಪರ ಎಂಬುದು ಅರ್ಥಹೀನವೇನೂ ಅಲ್ಲ. ಭಾರತವೆಂಬ ಭೂಮಿ ನೂರಾರು ಪ್ರಗತಿಪರರು, ಕ್ರಾಂತಿಕಾರಿಗಳು, ಸುಧಾರಣಾವಾದಿಗಳ ಕಾರಣದಿಂದಾಗಿ ನಿರಂತರವಾಗಿ ಬದಲಾಗುತ್ತಾ ಬಂದಿದೆ. ಮುಂದೆಯೂ ಬದಲಾಗಲಿದೆ. ಈ ದೃಷ್ಟಿಯಿಂದ ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿ ಈ ದೇಶದಲ್ಲಿ ಮೊದಲ ಬಾರಿಯೇನೂ ನಡೆದಿಲ್ಲ. ಇದಕ್ಕೆ ಕೊನೆಯೂ ಇಲ್ಲ.

- ಅಸ್ಮಿತ ಶೆಟ್ಟರ್

# ವಾರ್‌ನಿಂದ ವ್ಯಾಕ್ಸಿನ್ ವಾರ್ ಕಡೆಗೆ

**(1ನೇ ಪುಟದಿಂದ)** ಎಸ್.ಆರ್. ಉಮಾಶಂಕರ್ ಚಾಲನೆ ನೀಡಿದರು.

ಈ ಕೇಂದ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಎ. ದೀಪ ಅವರು ತಾಲೀಮಿನಲ್ಲಿ ಮೊದಲಿಗರಾಗಿದ್ದರು. ಆಧಾರ್ ಕಾರ್ಡ್ ನೀಡಿ ಹೆಸರು ನೋಂದಾಯಿಸಿದ ನಂತರ, ಅವರ ವಿಳಾಸವನ್ನು ದೃಢೀಕರಿಸಿಕೊಳ್ಳಲಾಯಿತು. ಕೊವಿನ್ ತಂತ್ರಾಂಶದ ಮೂಲಕ ದೀಪ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಯಿತು. ಅಣಕು ಲಸಿಕೆ ನೀಡಿದ ನಂತರ ಅರ್ಧ ಗಂಟೆ ವಿರಮಿಸಲಾಯಿತು.

ಈ ಸಂದರ್ಭದಲ್ಲಿ ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ಅವರು ಲಸಿಕೆ ತಾಲೀಮಿನ ಕುರಿತು ಮಾಹಿತಿ ನೀಡಿ, ಲಸಿಕೆ ನೀಡಿದಾಗ ವ್ಯತಿರಿಕ್ತ ಪರಿಣಾಮವಾದರೆ ಆ ಬಗ್ಗೆ ನಿಗಾ ವಹಿಸಲು 30 ನಿಮಿಷಗಳ ಕಾಲ ನಿಗಾ ಕೋಣೆಯಲ್ಲಿ ಇರಬೇಕಾಗುತ್ತದೆ ಎಂದರು.

ಅಡ್ವರ್ಸ್ ಇವೆಂಟ್ ಫಾಲೋಯಿಂಗ್ ಇಮ್ಯುನೈಸೇಷನ್ (ಎಇಎಫ್‌ಐ) ಕಿಟ್ ಅನ್ನು ಸಿದ್ಧವಾಗಿಟ್ಟುಕೊಳ್ಳಲಾಗಿರುತ್ತದೆ. ವ್ಯತಿರಿಕ್ತ ಪರಿಣಾಮ ಎದುರಾದಾಗ ಚಿಗಟೇರಿ ಆಸ್ಪತ್ರೆಗೆ ಕರೆದೊಯ್ಯಲು ಆಂಬ್ಯುಲೆನ್ಸ್ ಸಿದ್ಧವಾಗಿರಿಸಿಕೊಳ್ಳಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಉಮಾಶಂಕರ್, ಲಸಿಕೆ ಪಡೆದವರು 28 ದಿನಗಳ ನಂತರ ಎರಡನೇ ಸುತ್ತಿನ ಲಸಿಕೆಗೆ ಬರಬೇಕಾಗುತ್ತದೆ. ಈ ಅವಧಿಯಲ್ಲಿ ಸಮಸ್ಯೆಯಾದರೆ ಸಂಪರ್ಕಿಸಬೇಕಾದವರ ವಿವರ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಕರಪತ್ರದಲ್ಲಿ ವಿವರ ನೀಡಿ ಎಂದು ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಈ ಹಿಂದೆ ಕೋವಿಡ್ ವಾರ್ ರೂಂನಲ್ಲಿದ್ದ ಸಿಬ್ಬಂದಿಯನ್ನೇ ವ್ಯಾಕ್ಸಿನ್ ವಾರ್ ರೂಮ್‌ಗೆ ಬಳಸಿಕೊಳ್ಳಲು ಸಿದ್ಧತೆಗಳು ನಡೆದಿವೆ ಎಂದು ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಉಮಾಶಂಕರ್, ಜಿಲ್ಲೆಯ ಆರೂ ಕೇಂದ್ರಗಳಲ್ಲಿ ಗೊಂದಲ ಇಲ್ಲದೆ ಲಸಿಕೆಯ ತಾಲೀಮು ನಡೆದಿದೆ. ಪ್ರತಿದಿನ 100 ಜನರು ಬಂದರೂ ಲಸಿಕೆ ನೀಡಲು ಯಾವುದೇ ತೊಂದರೆಯಾಗದ ವ್ಯವಸ್ಥೆ ಇದೆ ಎಂದರು.

ಪ್ರತಿದಿನ ಲಕ್ಷಾಂತರ ಜನರಿಗೆ ಲಸಿಕೆ ನೀಡುವಾಗ ಮೊಬೈಲ್‌ಗೆ ಒ.ಟಿ.ಪಿ. ಪಡೆಯುವುದು ತೊಂದರೆಯಾಗುತ್ತದೆ. ಈ ಕಾರಣದಿಂದಾಗಿ ಒ.ಟಿ.ಪಿ. ರಹಿತವಾಗಿಯೂ ಲಸಿಕೆ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಜಿಲ್ಲೆಯ 17,500ರಷ್ಟು ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ಲಸಿಕೆ ನೀಡಲಾಗುತ್ತದೆ. ಅವರೆಲ್ಲರ ಮಾಹಿತಿಯನ್ನು ಮೊದಲೇ ಆನ್‌ಲೈನ್‌ನಲ್ಲಿ ಅಪ್ಡೇಟ್ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್, ಬಾಷಾನಗರದ ಯುಪಿಹೆಚ್‌ಸಿ ವೈದ್ಯಾಧಿಕಾರಿ ಡಾ. ಮಂಜುಳಾ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಸೇರಿದಂತೆ ವಿವಿಧ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜಿಲ್ಲೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆ ಹಾಗೂ ಎಸ್.ಎಸ್.ಐ.ಎಂ.ಎಸ್ ವೈದ್ಯಕಿಯ ಮಹಾವಿದ್ಯಾಲಯ, ಹೊನ್ನಾಳಿಯ ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರ ಮತ್ತು ಹರಿಹರ ತಾಲ್ಲೂಕಿನ ಕೊಂಡಜ್ಜಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಗಳಲ್ಲೂ ಲಸಿಕೆಯ ತಾಲೀಮು ನಡೆಸಲಾಯಿತು.

# ಅರ್ಧದಷ್ಟು ಸೈನಿಕರು ಒತ್ತಡದಲ್ಲಿ

**(1ನೇ ಪುಟದಿಂದ)** ಉಗ್ರವಾದಿ ಚಟುವಟಿಕೆಗಳಿಗಿಂತ ಹೆಚ್ಚಾಗಿ ಆತ್ಮಹತ್ಯೆ, ಸಹ ಸೈನಿಕರಿಂದ ಹತ್ಯೆ ಹಾಗೂ ಅಹಿತಕರ ಘಟನೆಗಳಿಂದಾಗಿ ಸಾವುಗಳು ಸಂಭವಿಸುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಒತ್ತಡ ನಿವಾರಣೆಗಾಗಿ ಭಾರತೀಯ ಸೈನ್ಯ ಹಾಗೂ ರಕ್ಷಣಾ ಇಲಾಖೆ ಕಳೆದ 15 ವರ್ಷಗಳಲ್ಲಿ ತೆಗೆದುಕೊಂಡಿರುವ ಕ್ರಮಗಳಿಂದ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗಿಲ್ಲ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ನಾಯಕತ್ವದ ಗುಣಗಳ ಕೊರತೆ, ಹೆಚ್ಚಿನ ಕೆಲಸದ ಒತ್ತಡ, ಅಸಮರ್ಪಕ ಸಂಪನ್ಮೂಲಗಳು, ಪದೇ ಪದೇ ಕೆಲಸದ ಸ್ಥಳ ಬದಲಿಸುವುದು, ನ್ಯಾಯಪರತೆಯ ಕೊರತೆ ಹಾಗೂ ನೇಮಕಾತಿ ಮತ್ತು ಬಡ್ತಿಗಳಲ್ಲಿ ಪಾರದರ್ಶಕತೆಯ ಕೊರತೆ, ಅಸಮರ್ಪಕ ವಸತಿ ಹಾಗೂ ರಜೆ ನೀಡದೇ ಇರುವುದರಿಂದ ಒತ್ತಡಕ್ಕೆ ಪ್ರಮುಖ ಕಾರಣಗಳು ಎಂದು ವರದಿಯಲ್ಲಿ ಹೇಳಲಾಗಿದೆ. ಪ್ರತಿ ವರ್ಷ ಆತ್ಮಹತ್ಯೆ ಹಾಗೂ ಸಹ ಸೈನಿಕರಿಂದಾಗಿ 100 ಜನರು ಸಾವಿಗೀಡಾಗುತ್ತಿದ್ದಾರೆ. ಪ್ರತಿ ಮೂರು ದಿನಕ್ಕೆ ಒಬ್ಬ ಸೈನಿಕ ಸಾಯುತ್ತಿರುವುದು ನೋವಿನ ವಾಸ್ತವ ಎಂದು ವರದಿಯಲ್ಲಿ ಹೇಳಲಾಗಿದೆ.

### ನೀವೇನಂತೀರಿ??

ಕಾಲದ ರೇಖೆಯ ದಾಟುತ ಸಾಗಿ,ಮಾಗಿ
ಮೂಡಲೆಲ್ಲರೆದೆಯಲಿ ಒಲವಿನ ದೀವಿಗೆ
ದೊರೆತ ವರಕೆ ಎರವಾಗದೆ ವಂದಿಸಿ...
ಸ್ಪಂದಿಸಿ ನೆರಳಾಗಿ-ನೊಂದವರ ಬಾಳಿಗೆ
"ಅಲೆಗಳೇರಿಳಿಯುತ ಸಾಗಲಿ ಬಾಳ ನೌಕೆ"
ಅಂತಾನೆ ಕೊಂಕುತಿಮ್ಮ!?

- ಮಹಾಂತೇಶ್ ಬಿ.ನಿಟ್ಟೂರು, ದಾವಣಗೆರೆ

# ಅನಿರೀಕ್ಷಿತ ಮಳೆಗೆ ಜನಜೀವನ ಅಸ್ತವ್ಯಸ್ತ

**(1ನೇ ಪುಟದಿಂದ)** ಬರಬೇಕಾದವರು ಅನ್ಯ ಮಾರ್ಗಗಳನ್ನು ಬಳಸುತ್ತಿದ್ದುದು ಕಂಡು ಬಂತು. ನಗರದ ತಗ್ಗು ಪ್ರದೇಶದಲ್ಲಿನ ಮನೆಗಳಿಗೆ ನೀರು ನುಗ್ಗಿದ ವರದಿಯಾಗಿದೆ.

ಜಲ ಸಿರಿ ಯೋಜನೆಯಡಿ ಪೈಪ್ ಲೈನ್ ಅಳವಡಿಕೆಗೆ ಗುಂಡಿ ತೆಗೆದು ಮುಚ್ಚಲಾಗಿದ್ದ ಜಾಗದ ಮೇಲೆ ಚಲಿಸಿದ ವಾಹನಗಳು ನೆಲದಲ್ಲಿ ಸಿಕ್ಕಿಹಾಕಿಕೊಂಡ ಘಟನೆಗಳು ಹದಡಿ ರಸ್ತೆಯಲ್ಲಿ ನಡೆದವು.

ಚಾಮರಾಜ ಪೇಟೆ ಬಳಿ ಇರುವ ಅಂಗಡಿಗಳಿಗೆ ನೀರು ನುಗ್ಗಿದ ಪರಿಣಾಮ ಲಕ್ಷಾಂತರ ರೂ. ಮೌಲ್ಯದ ಆಹಾರ ಪದಾರ್ಥಗಳು ನೀರುಪಾಲಾದ ಬಗ್ಗೆ ವರದಿಯಾಗಿದೆ. ಬಂಗಾಳ ಕೊಲ್ಲಿಯಿಂದ ಉಂಟಾದ ವಾಯುಭಾರ ಕುಸಿತದಿಂದ, ಚಳಿಗಾಲದಲ್ಲಿ ಪೂರ್ವ ದಿಕ್ಕಿನಿಂದ ಬರುವ ಕುಳಿರ್ಗಾಳಿ ಹೊತ್ತು ತಂದ ಮಳೆ ಸಿಟಿ ಜನಕ್ಕಂತೂ ಸಂತಸ ತಂತು.

**ವ್ಯವಹಾರ ಕುಸಿತ :** ಸಂಜೆ ಪುಟ್‌ಪಾತ್ ಮೇಲೆ ತಿಂಡಿ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳು ಮಳೆಯಿಂದಾಗಿ ನಷ್ಟ ಅನುಭವಿಸಬೇಕಾಯಿತು.

# ಪ್ರಗತಿ ಪಥದಲ್ಲಿ ಸನ್ಮತಿ ಸೌಹಾರ್ದ ಸಹಕಾರಿ

### ಸಂಘದ ಅಧ್ಯಕ್ಷ ಟಿ.ಎಂ. ಪಾಲಾಕ್ಷ ಹರ್ಷ

ದಾವಣಗೆರೆ, ಜ. 8- ಪ್ರಗತಿ ಪಥದಲ್ಲಿ ರುವ ನಗರದ ಕೆಲವೇ ಸಹಕಾರಿ ಸಂಘಗಳಲ್ಲೊಂದು ಎಂಬ ಹೆಗ್ಗಳಿಕೆಯನ್ನು ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ ಪಡೆದುಕೊಂಡಿದೆ ಎಂದು ಸಂಘದ ಅಧ್ಯಕ್ಷ ಟಿ.ಎಂ. ಪಾಲಾಕ್ಷ ಹರ್ಷ ವ್ಯಕ್ತಪಡಿಸಿದರು.

ಸಂಘದ ಕಚೇರಿಯಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಸಂಸ್ಥೆಯ 3ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಲ್ಪಾವಧಿಯಲ್ಲೇ ಪ್ರಗತಿಯ ಮುಂಚೂಣಿಯಲ್ಲಿ ಮುಂದುವರೆದಿರುವ ತಮ್ಮ ಸಂಘವು 2020 ಮಾರ್ಚ್ ಅಂತ್ಯಕ್ಕೆ 6.17 ಲಕ್ಷ ರೂ. ಲಾಭ ಗಳಿಸಿದೆ. ಸದಸ್ಯರಿಗೆ ಪ್ರಸಕ್ತ ಸಾಲಿನಲ್ಲಿ ಶೇ. 5ರಂತೆ ಲಾಭಾಂಶ ನೀಡಲು ಸಂಘದ ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಪಾಲಾಕ್ಷ ಅವರು ಸದಸ್ಯರ ಹರ್ಷೋದ್ಗಾರದ ನಡುವೆ ಘೋಷಿಸಿದರು.




ಸಹಕಾರಿಯ ಸದಸ್ಯರು, ಗ್ರಾಹಕರ ಪ್ರೀತಿ-ನಂಬಿಕೆ-ವಿಶ್ವಾಸ, ಸಿಬ್ಬಂದಿ ವರ್ಗ - ಪಿಗ್ಮಿ ಸಂಗ್ರಹಕಾರರ ಪರಿಶ್ರಮ, ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಇಚ್ಛಾಶಕ್ತಿಯಿಂದಾಗಿ ತಮ್ಮ ಸಂಘವು ಪ್ರಗತಿಯಲ್ಲಿದೆ ಎಂದು ತಿಳಿಸಿದ ಪಾಲಾಕ್ಷ ಅವರು, ಇದಕ್ಕೆ ಕಾರಣರಾದ ಎಲ್ಲರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ನಿರ್ದೇಶಕ ಸಿ. ನರಸಿಂಹ ಮೂರ್ತಿ ಅವರು ನೂತನ ಸಾಲಿನ ಆಯ-ವ್ಯಯ ಮಂಡಿಸಿದರು. ನಿರ್ದೇಶಕ ಸಿ.ಜಿ. ವೀರೇಶ್ ಕಳೆದ ಸಾಲಿನ ಲಾಭದ ವಿಂಗಡಣೆಯನ್ನು ಸಭೆಗೆ ವಿವರಿಸಿದರು.

ಸಂಘದ ನಿರ್ದೇಶಕರುಗಳಾದ ಎನ್. ಹೆಚ್. ಪ್ರಕಾಶ್ ಚಾರಿ, ಶ್ರೀಮತಿ ಉಷಾ ಸತೀಶ್, ಎಸ್.ಬಿ. ಚನ್ನಳ್ಳಿ, ಪ್ರಸಾದ್ ವಿ. ರಾಯ್ಕರ್, ಶ್ರೀಮತಿ ರಾಜೇಶ್ವರಿ ಮುರುಗೇಶ್, ಇಮ್ರಾನ್ ಖಾನ್, ನ್ಯಾಮತಿ ವಾಮದೇವ್ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಒಬೇದುಲ್ಲಾ ಅವರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಕು. ನೇಸರ ತಂಡದವರಿಂದ ಪ್ರಾರ್ಥನೆಯ ನಂತರ ಸಂಘದ ಉಪಾಧ್ಯಕ್ಷ ವಿ. ಹೆಚ್. ಕುಮಾರ್ ಸ್ವಾಗತಿಸಿದರು. ನಿರ್ದೇಶಕ ಎಂ.ಎನ್. ಹರೀಶ್ ವಂದಿಸಿದರು.

# 'ಸನಾತನ' ಅನುಭವ ಮಂಟಪ ಬಸವ ತತ್ವಗಳಿಗೆ ವಿರುದ್ಧ

**(1ನೇ ಪುಟದಿಂದ)** ನಿರ್ಮಾಣಕ್ಕೆ ಮುನ್ನುಡಿ ಬರೆದದ್ದು ನಮ್ಮ ಸರ್ಕಾರ. ಆದರೆ, ಈಗ ಯಡಿಯೂರಪ್ಪ ಅವರು ನಿರ್ಮಾಣ ಮಾಡಲು ಹೊರಟಿರುವ ಅನುಭವ ಮಂಟಪ ಬಸವ ತತ್ವಗಳಿಗೆ ವಿರುದ್ಧವಾಗಿದೆ ಎಂದಿದ್ದಾರೆ. ಸನಾತನ ಧರ್ಮದಲ್ಲಿದ್ದ ಜಾತಿ ಪದ್ಧತಿ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಮುಂತಾದ ಅನಿಷ್ಟ ಪದ್ಧತಿಗಳ ವಿರುದ್ಧ ಸಿಡಿದೆದ್ದು ಅನುಭವ ಮಂಟಪ ಸ್ಥಾಪಿಸಿ, ಅಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅಳವಡಿಸಿ, ಮನುಕುಲಕ್ಕೆ ಸಮಾನತೆಯನ್ನು ಸಾರಿದವರು ಜಗಜ್ಯೋತಿ ಬಸವೇಶ್ವರರು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಅನುಭವ ಮಂಟಪ ಬಸವ ತತ್ವವನ್ನು ಸಾರುವಂತಿರಬೇಕೇ ಹೊರತು, ಬಸವಣ್ಣನವರೇ ವಿರೋಧಿಸಿದ ಸನಾತನ ಚಿಂತನೆಗಳನ್ನಲ್ಲ. ಯಡಿಯೂರಪ್ಪ ಅವರು ಆರ್.ಎಸ್.ಎಸ್ ಮುಲಾಜಿಗೆ ಒಳಗಾಗಿ ಅನುಭವ ಮಂಟಪ ಸ್ಥಾಪನೆ ಮೂಲಕ ಸನಾತನ ಪ್ರಗತಿಪರ ಚಿಂತನೆಯ ಮರುಸೃಷ್ಟಿ ಮಾಡುತ್ತೇವೆ ಅಂತ ಹೇಳುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಬಿಜೆಪಿಯವರ ಕಾಂಗ್ರೆಸ್ ಮುಕ್ತ ಭಾರತ ನಿರ್ಮಾಣದ ಹಿಂದಿನ ಉದ್ದೇಶ ಸಂವಿಧಾನ ಬದಲಾವಣೆ ಮತ್ತು ವರ್ಣ ವ್ಯವಸ್ಥೆಯ ಮರುಸ್ಥಾಪನೆಯಾಗಿದೆ ಎಂದು ಆರೋಪಿಸಿರುವ ಅವರು, ಸಮಾಜದಲ್ಲಿ ತಾರತಮ್ಯ ಜೀವಂತವಾಗಿದ್ದರೆ ಮತ ಧ್ರುವೀಕರಣ ಸಾಧ್ಯ ಎಂಬುದು ಬಿಜೆಪಿಯ ಲೆಕ್ಕಾಚಾರ. ಇದನ್ನು ಜನ ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

# ರಾಷ್ಟ್ರಮಟ್ಟದಲ್ಲಿ ಕರಾಟೆ ಪಟುಗಳ ಸಾಧನೆ



ದಾವಣಗೆರೆ, ಜ.8- ಜಿಲ್ಲೆಯಲ್ಲಿ ಡಿಸೆಂಬರ್‌ನಲ್ಲಿ ನಡೆದ ಪ್ರಥಮ ರಾಜ್ಯಮಟ್ಟದ ಇ-ಕಥಾ ಆನ್‌ಲೈನ್ ಚಾಂಪಿಯನ್‌ಶಿಪ್-2020 ರಲ್ಲಿ ಗುರುಕುಲ ಮಾರ್ಷಲ್ ಆರ್ಟ್ಸ್ ಮತ್ತು ಸೆಲ್ಫ್ ಡಿಫೆನ್ಸ್ ಅಕಾಡೆಮಿಯ ಕರಾಟೆ ಪಟುಗಳು ಭಾಗವಹಿಸಿ ಸಾಧನೆ ತೋರಿದ್ದಾರೆ.

10 ವರ್ಷದೊಳಗಿನ (ಎ-ಬಿ) ವಿಭಾಗದಲ್ಲಿ ಅಫಿಸಿಯಾ ಫಾತಿಮಾ, ಅಕ್ಸಾ ಮಲ್ಲಿಕ್ ಕಂಚಿನ ಪದಕ, 15 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಅಫಿಯಾ ಬಂಗಾರ ಪದಕ, 12 ವರ್ಷದೊಳಗಿನ ವಿಭಾಗದಲ್ಲಿ ಜಿ.ಎಸ್. ಮೊಹಮ್ಮದ್ ಮಬಾರಕ್ ಬಂಗಾರ , 14 ವರ್ಷದ (ಎ,ಬಿ,ಸಿ) ವಿಭಾಗದಲ್ಲಿ ಅನುರಾಗ್ ಎಸ್. ಚಿನ್ಮಯ್‌ಗೌಡ, ಕೀರ್ತನ್ ಕೋಟೆ ಬೆಳ್ಳಿ ಪದಕವನ್ನು ಪಡೆದಿದ್ದಾರೆ ಎಂದು ಮುಖ್ಯ ತರಬೇತುದಾರ ಅಬ್ದುಲ್ ಇಮ್ರಾನ್, ಸಹ ತರಬೇತುದಾರರಾದ ಎನ್.ವೆಂಕಟೇಶ್ ಹಾಗೂ ಕೃಷ್ಣ ತಿಳಿಸಿದ್ದಾರೆ.


**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ ಮಾವಿನ ತೋಪು ಆಸ್ಪತ್ರೆ ಹಿಂಭಾಗ, 40x60, North, 3 ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್ ಇದೆ.
ಐನಳ್ಳಿ ಚನ್ನಬಸಪ್ಪ
99166 12110

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**ಕಳೆದಿದೆ**
ಮನೆ ಮುಂದೆ ನಿಲ್ಲಿಸಿದ್ದ CD 100 ಮೋಟಾರ್ ಬೈಕ್ KA-17-J-9560 ಗುರುವಾರ ಬೆಳಗಿನ ಜಾವ ಕಳೆದಿದೆ ಸಿಕ್ಕವರು ಸಂಪರ್ಕಿಸಿ:
98448 50335

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬೇಕಾಗಿದ್ದಾರೆ**
ಅಡುಗೆ, ಮನೆಕೆಲಸ, ಬಾಣಂತಿ ಹಾಗೂ ಮಗುವನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ
88924 69449

**ಮನೆ ಮಾರುವುದಿದೆ**
ಜಯನಗರದಲ್ಲಿ ಈಗಾಗಲೇ ಲೀಸ್‌ನಲ್ಲಿರುವ ಪಶ್ಚಿಮ ದಿಕ್ಕಿನ (ಕಾರ್ನರ್) 30x40 ಅಳತೆಯ ಎರಡು ಅಂತಸ್ತಿನ ಸುಸಜ್ಜಿತ ಹೊಸ ಮನೆ ಮಾರುವುದಿದೆ ಆಸಕ್ತರು ಸಂಪರ್ಕಿಸಿ:
91104 29654

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಶ್ರೀಮಾತಾ ವಿದ್ಯಾಸಂಸ್ಥೆ (ರಿ.) ಆಶ್ರಯದಲ್ಲಿ ನಡೆಯುತ್ತಿರುವ **ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ**, ದೇವರಾಜ ಅರಸ್ ಬಡಾವಣೆ 6ನೇ ಕ್ರಾಸ್ 'ಸಿ' ಬ್ಲಾಕ್, ದಾವಣಗೆರೆ, BA, B.Ed. / MA, B.Ed ತರಬೇತಿ ಹೊಂದಿದ ಕನ್ನಡ ವಿಷಯ ಶಿಕ್ಷಕರುಗಳು ಬೇಕಾಗಿದ್ದಾರೆ.
Mob. 99640 17729

**ಸೈಟ್‌ಗಳು ಮಾರಾಟಕ್ಕಿವೆ**
40x60 East ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ., 60x40 ಮಹಾಲಕ್ಷ್ಮಿ ಲೇಔಟ್‌ನಲ್ಲಿ ಕಾರ್ನರ್., 30x63 ಡಾಲರ್ಸ್ ಕಾಲೋನಿಯಲ್ಲಿ south west cornner.
ಐನಳ್ಳಿ ಚನ್ನಬಸಪ್ಪ
99166 12110

**ಬೇಕಾಗಿದ್ದಾರೆ**
ಫುಡ್ ಮಾರ್ಟ್ ಸೂಪರ್ ಮಾರ್ಕೆಟ್ ದಾವಣಗೆರೆ ಇಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: ಯಾವುದೇ ಡಿಗ್ರಿ
98864 63531

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಚೈನೀಸ್/ನಾರ್ತ್ ಫುಡ್, ತಂದೂರಿ ರೊಟಿ, ಸ್ಪೆಷಲ್ ಟೀ/ ಕಾಫಿ, ರೊಟ್ಟಿ/ ಚಪಾತಿ ಮಾಡುವವರು, ಸಪ್ಲೈಯರ್, ಕ್ಲೀನರ್ ಬೇಕಾಗಿದ್ದಾರೆ. ಸಂಪರ್ಕಿಸಿ :-
99012 36631

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. SSLC, PUC, ITI, Any Degree
76248 55384
80954 95933

**ಬೇಕಾಗಿದ್ದಾರೆ**
ವಾಟರ್ ಟ್ಯಾಂಕ್ ಕ್ಲೀನಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ 7500/- ಸಮಯ: 9 ರಿಂದ ಸಂಜೆ 6
74837 91617

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಅಂಗಡಿ ಕೆಲಸ ಮಾಡಲು ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ನಯನ ಏಜೆನ್ಸೀಸ್ ಚಾಮರಾಜ ಪೇಟೆ, ದಾವಣಗೆರೆ.
99162 36521

**ಬೇಕಾಗಿದ್ದಾರೆ**
ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
89715 04492
81056 99985
99004 67508

**ರೂಂ ಬಾಡಿಗೆಗೆ ಇದೆ**
ಎಸ್. ನಿಜಲಿಂಗಪ್ಪ ಬಡಾವಣೆ (ರಿಂಗ್ ರಸ್ತೆ) 14ನೇ ಕ್ರಾಸ್‌ನ, 2ನೇ ಮಹಡಿಯಲ್ಲಿ ಅಟ್ಯಾಚ್ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ.
98864 11119

**ಬೇಕಾಗಿದ್ದಾರೆ**
ಅನುಭವವುಳ್ಳ ದೋಸೆ ಭಟ್ಟರು ಬೇಕಾಗಿದ್ದಾರೆ.
87222 00025

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್ ನಲ್ಲಿ ಸೂಪರ್ ವೈಸರ್ ಕೆಲಸಕ್ಕೆ ಪಿಯುಸಿ ಆಗಿರುವ ಹುಡುಗರು ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ :
ಶಂಕರಲೀಲಾ ಪೆಟ್ರೋಲ್ ಬಂಕ್ ದಾವಣಗೆರೆ.
ಮೊ. 96117 44810

**1BHK ಮನೆ ಬಾಡಿಗೆಗೆ**
ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತ, 4ನೇ ಮೇನ್, 4ನೇ ಕ್ರಾಸ್‌ನಲ್ಲಿ (# 678/10-A) ಮೊದಲನೇ ಮಹಡಿಯಲ್ಲಿ 1BHK ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ:
ಎ.ಜಿ. ಪ್ರಭುಶಂಕರ್
91640 41134

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 9ನೇ ಕ್ರಾಸ್, ಭದ್ರಾ ಕಾಲೇಜ್ ಹಿಂಭಾಗ, 1BHK ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
90080 55813

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ, 1ನೇ ಕ್ರಾಸ್, ನಂ. 1077/10ರಲ್ಲಿ 3 ಬೆಡ್‌ರೂಂ, ಕಾರ್ ಪಾರ್ಕಿಂಗ್ ಇರುವ ಮೊದಲ ಮಹಡಿ ಮನೆ ಬಾಡಿಗೆಗೆ ಇದೆ.
97425 52737

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open) #264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಹುಡುಗರು ಬೇಕಾಗಿದ್ದಾರೆ**
ಎಸ್. ನಿಜಲಿಂಗಪ್ಪ ಬಡಾವಣೆಯ ಅರುಣ್ ಡ್ರೈವಿಂಗ್ ಸ್ಕೂಲ್ ಪಕ್ಕದ ಪೇಪರ್ ಕಪ್ ತಯಾರಿಕಾ ಘಟಕದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿ.
ಕರೆ ಮಾಡುವ ಸಮಯ : ಬೆ. 9 ರಿಂದ ಸಂಜೆ 5ರ ವರೆಗೆ ಮಾತ್ರ
ಮೊ. 95916 64448

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open) #264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಡ್ರೈವರ್ ಬೇಕಾಗಿದ್ದಾರೆ**
ಕೊರಿಯರ್ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಸ್ಥಳೀಯರಿಗೆ ಆದ್ಯತೆ.
91139 65957
91641 60172

**ಮನೆ ಬಾಡಿಗೆಗೆ ಇದೆ**
M.C.C. A Block ನಲ್ಲಿ (ಚರ್ಚ್ ಹತ್ತಿರ) ಎಲ್ಲ ಅನುಕೂಲಗಳಿರುವ 1 ಬೆಡ್ ರೂಮ್ ಇರುವ ವಿಶಾಲವಾದ ಮನೆ ಬಾಡಿಗೆಗೆ ಇದೆ. ಹಿಂದೆ, ಮುಂದೆ, RCC, ಮಧ್ಯ ಶೀಟ್ ಇರುವ, ಮಹಡಿಯ ಮೇಲಿರುವ ಮನೆ ಕಡಿಮೆ ಬಾಡಿಗೆಯಲ್ಲಿ ದೊರೆಯುತ್ತದೆ.
97430 98298

**ಮನೆ ಲೀಸ್‌ಗೆ ಇದೆ**
ನಂ. 2368/1, ಜೀವನ್ ಬಿಮಾ ನಗರ, ಪಂಪ್ ಹೌಸ್ ರಸ್ತೆ, 30x40 ಗ್ರೌಂಡ್ ಫ್ಲೋರ್, 2 ಬಿಹೆಚ್‌ಕೆ, ಮುನ್ಸಿಪಲ್, ಬೋರ್ ನೀರಿನ ಸೌಕರ್ಯವಿದ್ದು ಲೀಸ್‌ಗೆ ಇದೆ. ಸಂಪರ್ಕಿಸಿ :
94826 68578, 94837 72698

**ಬೇಕಾಗಿದ್ದಾರೆ**
ದಾವಣಗೆರೆ ಹತ್ತಿರ ಬೇತೂರು ಮತ್ತು ನಲ್ಲೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟೀಸ್ ಮತ್ತು ರೂಂ ಬಾಯ್ಸ್ ಹಾಗೂ ಲಾಡ್ಜ್‌ನಲ್ಲಿ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳ. ಕೂಡಲೇ ಸಂಪರ್ಕಿಸಿ :
74113 07071, 98806 48207

**ಬೇಕಾಗಿದ್ದಾರೆ**
ಪಾಲಿಕ್ಲಿನಿಕ್‌ಗೆ ರಿಸೆಪ್ಷನಿಸ್ಟ್ ಹಾಗೂ ಕ್ಲಿನಿಕಲ್ ಅಸಿಸ್ಟೆಂಟ್ ಬೇಕಾಗಿದ್ದಾರೆ. (ಪುರುಷ ಅಥವಾ ಮಹಿಳೆ) ಸಂಪರ್ಕಿಸಿ :
99861 63315
80502 21315
99009 78086

**CHANGE OF NAME**
I, SUDHA N. D/o. NAGAPPA age about 26 years residing at # 261, 'B' Block, SOG Colony, Bapuji Vidyanagar, Davangere - 577 005 has changed my name as KEERTHI N. before Notary on 08.01.2021. In future all my transactions and documents are will be in my new name as undersigned.
- KEERTHI N.

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**'ನೋನಿ' ಜ್ಯೂಸ್ ಹಾಗೂ ಆಯುರ್ವೇದ ಔಷಧಿಗಳು**
ರಿಯಾಯಿತಿ ದರದಲ್ಲಿ ದೊರೆಯುತ್ತವೆ
Free Home Delivery
80954 56388
80738 29135

**PWD & NAVODAYA COACHING**
New Batches Started
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**Simple vaastu**
ಸಿಂಪಲ್ ವಾಸ್ತು
98444 88838

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ITI ಡೀಸೆಲ್ ಮೆಕ್ಯಾನಿಕಲ್ or ಫಿಟ್ಟರ್ ಆಗಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. (ಸೇಲ್ಸ್ ಮತ್ತು ಸರ್ವೀಸ್‌ಗೆ)
ಶಾರದಾ ಆಟೋಸ್
#337/59, ಗಣೇಶ್ ಲೇಔಟ್, KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ-3
08192-236457

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆಯಲ್ಲಿಯೇ ಇದ್ದು ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಸತಿ ಕೊಡಲಾಗುವುದು, ಅಥವಾ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಕೆಲಸ.
77604 84814
98865 67791

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

# ಶ್ರೀಮಂತರು ಸಾಮೂಹಿಕ ವಿವಾಹಗಳಿಗೆ ಒತ್ತು ನೀಡಬೇಕು : ಶಾಸಕ ಎಸ್. ರಾಮಪ್ಪ

## ಹಾಲಿವಾಣ : ಮರಿಬನ್ನಿ, ದೊಡ್ಡ ಎಡೆಜಾತ್ರೆ, ಸಾಮೂಹಿಕ ವಿವಾಹ



ಮಲೇಬೆನ್ನೂರು, ಜ.8- ಶ್ರೀಮಂತರು ತಮ್ಮ ಮಕ್ಕಳ ಮದುವೆಯಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ಬಡಜನರಿಗೆ ನೆರವಾಗುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕೆಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಅವರು ಶುಕ್ರವಾರ ಹಾಲಿವಾಣ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆಜಾತ್ರೆ, ಮರಿಬನ್ನಿ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕುಟುಂಬದಲ್ಲಿ ವ್ಯತ್ಯಾಸಗಳು ಬರುವುದು ಸಹಜ, ಅವುಗಳನ್ನು ಸರಿಪಡಿಸಿಕೊಂಡು ಹೋದರೆ ಬದುಕು ಸಮೃದ್ಧಿಯಿಂದ ಕೂಡಿರುತ್ತದೆ ಎಂದು ರಾಮಪ್ಪ ಅವರು ನೂತನ ವಧು-ವರರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ರಶ್ಮಿ ವೈ. ನಾಗಪ್ಪ ಮಾತನಾಡಿ, ಸತಿ-ಪತಿಗಳ ನಡುವೆ ಸಾಮರಸ್ಯ ಹಾಗೂ ಸಮಾನತೆ ಇದ್ದರೆ ಜೀವನ ಸಂತೋಷವಾಗಿರುತ್ತದೆ ಎಂದರು.

ಈಶ್ವರೀಯ ವಿಶ್ವವಿದ್ಯಾಲಯದ ಮಲೇಬೆನ್ನೂರು ಕೇಂದ್ರದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾ ಮಾತನಾಡಿ, ಸಂಸಾರದಲ್ಲಿ ಬಂದ ನಂತರ ಪರಮಾತ್ಮನನ್ನು ಮರೆಯಬೇಡಿ. ದುಃಖದಲ್ಲಿ ಎಲ್ಲರೂ ಪರಮಾತ್ಮನನ್ನು ಮಾತ್ರ ನೆನೆದು, ಸುಖ ಬಂದಾಗ ಮರೆತುಬಿಡಬೇಡಿ. ನಿಮ್ಮ ಸಂತೋಷದಲ್ಲೂ ಪರಮಾತ್ಮನನ್ನು ಪ್ರಾರ್ಥಿಸಿ, ಉತ್ತಮ ಹಾದಿಯಲ್ಲಿ ನಡೆದರೆ ನೀವು ಯಾವತ್ತೂ ಸುಖ-ಶಾಂತಿಯಿಂದ ಇರಬಹುದೆಂದು ವಧು-ವರರಿಗೆ ಹೇಳಿದರು.

ಹದಡಿ ಚಂದ್ರಗಿರಿ ಮಠದ ಸದ್ಗುರು ಶ್ರೀ ಮುರಳೀಧರ ಸ್ವಾಮೀಜಿ ಮಾತನಾಡಿ, ವಧು-ವರರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ಹಾಗೂ ಶಿಕ್ಷಣ ನೀಡಿ ದೇಶದ ಸತ್ಪ್ರಜೆಗಳನ್ನಾಗಿ ಮಾಡಿ ಎಂದರು.

ಜಿ.ಪಂ. ಮಾಜಿ ಅಧ್ಯಕ್ಷ ಜಿ. ದ್ಯಾಮಣ್ಣ, ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಾಟೀಲ್, ತಾ.ಪಂ. ಮಾಜಿ ಅಧ್ಯಕ್ಷರಾದ ಎಂ.ಬಿ. ರೋಷನ್, ಐರಣಿ ಅಣ್ಣಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್ ಮಾತನಾಡಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಗ್ರಾ.ಪಂ. ಸದಸ್ಯರಾದ ದಿಬ್ಬದಹಳ್ಳಿ ಓಂಕಾರಪ್ಪ, ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್, ಕೊಪ್ಪದ ಚಂದ್ರಪ್ಪ, ಹಾಲಿವಾಣದ ಲಲಿತಮ್ಮ ಪೂಜಾರ್, ಲಕ್ಷ್ಮೀದೇವಿ ಮಂಜುನಾಥ್, ದೀಪಾರಾಜು, ಡಿ.ಡಿ. ಚಿಕ್ಕಪ್ಪ, ಎಸ್.ಇ. ಹಾಲೇಶ್, ರೇಣುಕಮ್ಮ, ವಿಶಾಲಮ್ಮ ನಾಗರಾಜ್, ಗ್ರಾಮದ ತಿಪ್ಪಣ್ಣ ಮೇಷ್ಟ್ರು, ಕೆ.ಪಿ. ಕುಮಾರಸ್ವಾಮಿ, ಟಿ. ಕರಿಯಪ್ಪ, ಪಿ.ಕೆ. ಮೋಹನ್, ಎ.ಕೆ. ಕರಿಯಪ್ಪ, ಕುಡಪಲಿ ತಿಪ್ಪೇಶ್, ಪಿಡಿಓ ರಮೇಶ್, ಮಲೇಬೆನ್ನೂರಿನ ಪಿ.ಹೆಚ್. ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಕಾರ್ಯಕ್ರಮದ ರೂವಾರಿ ಹಾಗೂ ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಸ್ವಾಗತಿಸಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿಲ್ ಕಲೆಕ್ಟರ್ ಡಿ.ಡಿ. ರೇವಣಸಿದ್ದಪ್ಪ ನಿರೂಪಿಸಿದರೆ, ಕೊನೆಯಲ್ಲಿ ಗೊಂದೇರ ರೇವಣಸಿದ್ದಪ್ಪ ವಂದಿಸಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ರಟ್ಟೆಹಳ್ಳಿ ಕಬ್ಬಿಣದ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮಕ್ಕೆ ಮುನ್ನ ಆಗಮಿಸಿ, ಬೀರ ದೇವರಿಗೆ ಪೂಜೆ ಸಲ್ಲಿಸಿದರು.

# ನಗರಕ್ಕೆ ಇಂದು ಜಿಲ್ಲಾ ಲಯನ್ಸ್ ರಾಜ್ಯಪಾಲ ಎನ್.ಎಂ. ಹೆಗಡೆ



ಜಿಲ್ಲಾ ಲಯನ್ಸ್ ರಾಜ್ಯಪಾಲ ಎನ್.ಎಂ. ಹೆಗಡೆ ಅವರು ದಾವಣಗೆರೆ ಲಯನ್ಸ್ ಕ್ಲಬ್ ಗೆ ಅಧಿಕೃತ ಭೇಟಿ, ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧನೆ ಹಾಗೂ ವಿವಿಧ ಸೇವಾ ಕಾರ್ಯಕ್ರಮಗಳು ಇಂದು ಸಂಜೆ 6.35ಕ್ಕೆ ಲಯನ್ಸ್ ಭವನದಲ್ಲಿ ನಡೆಯಲಿವೆ.

ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಎಂ. ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ಬಿ.ಎಸ್. ನಾಗಪ್ರಕಾಶ್, ವೈ.ಬಿ. ಸತೀಶ್ ಉಪಸ್ಥಿತರಿರುವರು. ಬೆಳಿಗ್ಗೆ 10 ರಿಂದ 3 ಗಂಟೆಯ ವರೆಗೆ ಲಯನ್ಸ್ ಕ್ವೆಸ್ಟ್ ಸ್ಪಿಚ್ ಮತ್ತು ಹಿಯರಿಂಗ್ ಸೆಂಟರ್ ನಲ್ಲಿ ಉಚಿತ ಶ್ರವಣ ದೋಷ ಪರೀಕ್ಷಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ವೃದ್ಧರಿಗೆ ಉಚಿತವಾಗಿ ಶ್ರವಣ ಯಂತ್ರಗಳನ್ನು ವಿತರಿಸಲಾಗುತ್ತದೆ.

ವಿವರಕ್ಕೆ ಟಿ.ವಿ. ಸುಬ್ಬರಾಜು (9844131035) ಅವರನ್ನು ಸಂಪರ್ಕಿಸಬಹುದು ಎಂದು ಕಾರ್ಯದರ್ಶಿ ಕೋರಿ ಶಿವಕುಮಾರ್, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್, ಖಜಾಂಚಿ ಸಂಪತ್ ಬಿ. ಹಳ್ಳಿಕೇರಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ರಸಮಂಜರಿ ಕಾರ್ಯಕ್ರಮ

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಇಂದು ಸಂಜೆ 6 ಗಂಟೆಗೆ ಶಿವಯೋಗ ಮಂದಿರದಲ್ಲಿ 65ನೇ ಕನ್ನಡ ರಾಜ್ಯೋತ್ಸವ, ಹಾಸ್ಯಸಂಜೆ ಮತ್ತು ರಸ ಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಜಿ.ಎಂ. ಸಿದ್ದೇಶ್ವರ ಕಾರ್ಯಕ್ರಮ ಉದ್ಘಾಟಿಸುವರು. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್ ಭುವನೇಶ್ವರಿ ಭಾವಚಿತ್ರ ಅನಾವರಣಗೊಳಿಸುವರು. ಕೆ.ಜಿ. ಯಲ್ಲಪ್ಪ ಅಧ್ಯಕ್ಷತೆ ವಹಿಸುವರು.

ಅತಿಥಿಗಳಾಗಿ ಎಸ್.ವಿ. ರಾಮಚಂದ್ರಪ್ಪ, ಎಸ್.ರಾಮಪ್ಪ, ಮಹಾಂತೇಶ್ ಬೀಳಗಿ, ಹನುಮಂತರಾಯ, ಬಿ.ಜೆ. ಅಜಯಕುಮಾರ್, ಶರಣಪ್ಪ ವಿ. ಹಲಸೆ, ಜಿ.ಎಂ.ಆರ್. ಆರಾಧ್ಯ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಸದಾನಂದ ಹೆಗಡೆ, ವೀರಪ್ಪ ಎಂ. ಬಾವಿ, ಮಧು ನಾಗರಾಜ್, ಪಿ.ಎಸ್. ಲೋಕೇಶ್, ಟಿ.ಆರ್. ವಿಶ್ವನಾಥ್, ರಾಘವೇಂದ್ರ ನಾಯರಿ, ಐಗೂರು ಸುರೇಶ್, ಟಾರ್ಗೆಟ್ ಅಸ್ಲಾಂ, ಸಾಜಿದ್ ಅಹಮದ್ ಮತ್ತಿತರರನ್ನು ಸನ್ಮಾನಿಸಲಾಗುತ್ತದೆ.

# ಮಹಿಳಾ ಬೀದಿ ವ್ಯಾಪಾರಿಗಳಿಗೆ ಪ್ರೋತ್ಸಾಹ ಧನ

ದಾವಣಗೆರೆ, ಜ.8- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಸಾಲಿನ ಪ.ಜಾತಿ, ಪ.ಪಂಗಡ ಉಪ ಯೋಜನೆಯ ಸಮೃದ್ಧಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬೀದಿಬದಿ ವ್ಯಾಪಾರ ಮಾಡುವ ಮಹಿಳೆಯರಿಗೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವವರು ಆಯಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅರ್ಹ ದಾಖಲೆಗಳೊಂದಿಗೆ ಇದೇ ದಿನಾಂಕ 27 ರೊಳಗೆ ಸಂಬಂಧಪಟ್ಟ ಶಿಶು ಅಭಿ ವೃದ್ಧಿ ಯೋಜನಾಧಿಕಾರಿಗಳ ಕಚೇರಿ ಗಳಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ 08192-296268ಕ್ಕೆ ಸಂಪರ್ಕಿಸಲು ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ನಗರದಲ್ಲಿ ನಾಡಿದ್ದು ಬಿಜೆಪಿಯಿಂದ ಜನ ಸೇವಕ್ ಸಮಾವೇಶ

ದಾವಣಗೆರೆ, ಜ.8- ಇದೇ ದಿನಾಂಕ 11ರ ಸೋಮವಾರ ಬಿಜೆಪಿಯಿಂದ ಜನಸೇವಕ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಮಧ್ಯಾಹ್ನ 2.30ಕ್ಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಗೆಲುವು ಕಂಡ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿ, ಮುಂಬರುವ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆಗಳಿಗೆ ಸಜ್ಜುಗೊಳಿಸುವ ಉದ್ದೇಶದಿಂದ ಈ ಸಮಾರಂಭ ಆಯೋಜಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ನಡೆದ ಗ್ರಾ.ಪಂ. ಚುನಾವಣೆಯಲ್ಲಿ 1614 ಬಿಜೆಪಿ ಬೆಂಬಲಿಗರು ಜಯ ಸಾಧಿಸಿದ್ದರು. 151 ಗ್ರಾ.ಪಂ.ಗಳಲ್ಲಿ ಬಿಜೆಪಿ ಚುಕ್ಕಾಣಿ ಹಿಡಿಯಲಿದೆ.

ಮೀಸಲಾತಿ ಆಧಾರದ ಮೇಲೆ ಈ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದರು.

20 ಲಕ್ಷದಿಂದ 1.5 ಕೋಟಿ ರೂ.ವರೆಗೆ ಗ್ರಾ.ಪಂ.ಗಳಿಗೆ ಅನುದಾನ ಬರುತ್ತದೆ.

ಗ್ರಾ.ಪಂ, ತಾ.ಪಂ, ಜಿ.ಪಂ.ಗಳಲ್ಲಿ ಒಂದೇ ಪಕ್ಷ ಅಧಿಕಾರವಿದ್ದರೆ ಅಭಿವೃದ್ಧಿಗೆ ಅಡೆತಡೆ ಇರುವುದಿಲ್ಲ ಎಂದರು.

ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ, ಗೃಹ ಸಚಿವ ಲಕ್ಷ್ಮಣ ಸವದಿ, ಸಚಿವ ಬಸವರಾಜ ಬೊಮ್ಮಾಯಿ, ಶ್ರೀರಾಮುಲು, ಶಿವಕುಮಾರ ಉದಾಸಿ ಮುಂತಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

# ಏನಮ್ಮ, ಓಟ್ ಹಾಕಕ್ಕೆ ರೆಡಿನಾ....

## ಕ್ಷೇತ್ರಗಳಿಗೆ ಅಧಿಕಾರಿಗಳು ಭೇಟಿ ನೀಡಿ ಮತಪಟ್ಟಿ ಪರಿಷ್ಕರಣೆ ಕಾರ್ಯಕ್ರಮ ಪರಿಶೀಲನೆ



ದಾವಣಗೆರೆ, ಜ. 8 - ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮ ಸಂಬಂಧ ಮತದಾರರ ಪಟ್ಟಿ ವೀಕ್ಷಕರು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ದಾವಣಗೆರೆ ನಗರದ ಭಾಷಾನಗರದಲ್ಲಿ ಮನೆಯೊಂದಕ್ಕೆ ಭೇಟಿ ನೀಡಿ ಖುದ್ದು ಪರಿಶೀಲನೆ ನಡೆಸಿದರು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು 18 ವರ್ಷ ಪೂರ್ಣಗೊಂಡ ಯುವತಿ ಸಲ್ಲಿಸಿದ್ದ ಅರ್ಜಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದ ಅವರು, 'ಏನಮ್ಮ ಓಟ್ ಹಾಕಕ್ಕೆ ರೆಡಿನಾ...' ಎಂದು ಕಿರು ನಗುವಿನೊಂದಿಗೆ ಪ್ರಶ್ನಿಸಿದರು. ಇದಕ್ಕೆ ಮುಗುಳ್ನಗೆಯೊಂದಿಗೆ ಪ್ರತಿಕ್ರಿಯಿಸಿದ ಆ ಯುವತಿ 'ರೆಡಿಯಾಗಿದೀನಿ ಸರ್, ಚುನಾವಣೆ ಬರಲಿ, ಖಂಡಿತಾ ಓಟು ಹಾಕುತ್ತೇನೆ ಎಂದಳು.

ಹಿರಿಯ ಅಧಿಕಾರಿಗಳು ತಮ್ಮ ಮನೆಗೆ ಖುದ್ದು ಭೇಟಿ ನೀಡಿ, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಬಿಎಲ್‌ಒಗೆ ಸಲ್ಲಿಸಿದ್ದ ಅರ್ಜಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದ ಪರಿಗೆ ಆಶ್ಚರ್ಯಚಕಿತರಾದಂತೆ ಕಂಡುಬಂದ ಆ ಮನೆಯ ಕುಟುಂಬಸ್ಥರು ಸಂತಸ ವ್ಯಕ್ತಪಡಿಸಿದರು.

ಚುನಾವಣೆ ಸಂದರ್ಭದಲ್ಲಿ ಮತ ಚಲಾಯಿಸಲು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೆ, ನೈತಿಕವಾಗಿ ಮತದಾನ ಮಾಡಬೇಕು, ಯಾರದೇ ಒತ್ತಡ ಅಥವಾ ಭೀತಿಗೆ ಒಳಗಾಗದೆ, ಒಳ್ಳೆಯ ಅಭ್ಯರ್ಥಿಗೆ ತಮ್ಮ ಮತ ಚಲಾಯಿಸಬೇಕು, ಅಲ್ಲದೆ ತಪ್ಪದೇ ಮತದಾನ ಮಾಡಬೇಕು ಎಂದು ಮತದಾರರ ಪಟ್ಟಿ ವೀಕ್ಷಕರಾದ ಎಸ್.ಆರ್. ಉಮಾಶಂಕರ್ ಇದೇ ಸಂದರ್ಭದಲ್ಲಿ ಜಾಗೃತಿ ಮೂಡಿಸಿದರು.

'ಯಾರಿಗೆ ಓಟ್ ಹಾಕ್ತೀರಿ' ಎಂದು ಹಾಸ್ಯಮಿಶ್ರಿತ ಧ್ವನಿಯಲ್ಲಿ ಪ್ರಶ್ನಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಉತ್ತರ ನೀಡಿದ ಕುಟುಂಬದ ಮತದಾರರು, ಚುನಾವಣೆ ಸಂದರ್ಭದಲ್ಲಿ ನಮಗೆ ಯಾರು ಸೂಕ್ತ ಹಾಗೂ ಒಳ್ಳೆಯ ಅಭ್ಯರ್ಥಿ ಎಂದು ಅನ್ನಿಸುತ್ತದೆಯೋ, ಅವರಿಗೇ ಮತ ನೀಡುತ್ತೇವೆ. ಯಾವುದೇ ಆಸೆ, ಆಮಿಷಗಳಿಗೆ ತಮ್ಮ ಮತ ಮಾರಿಕೊಳ್ಳುವುದಿಲ್ಲ ಎಂದು ಭರವಸೆಯ ಮಾತುಗಳನ್ನಾಡಿದರು.

ಮತಗಟ್ಟೆ ವಿಭಾಗದಲ್ಲಿ ಹೊಸದಾಗಿ ಹೆಸರು ಸೇರ್ಪಡೆಗೊಳಿಸಲು, ತೆಗೆದುಹಾಕಲು, ತಿದ್ದುಪಡಿ ಹಾಗೂ ಸ್ಥಳಾಂತರಕ್ಕೆ ಸಲ್ಲಿಸಲಾದ ಅರ್ಜಿಗಳ ಕುರಿತು ಸಂಬಂಧಪಟ್ಟ ಬಿಎಲ್‌ಒ ಅವರಿಂದ ಜಿಲ್ಲಾಧಿಕಾರಿಗಳು ಇದೇ ಸಂದರ್ಭದಲ್ಲಿ ಮಾಹಿತಿ ಪಡೆದುಕೊಂಡರು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಸೇರಿದಂತೆ ವಿವಿಧ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಜೋಳದ ರಾಶಿ ಗುಡ್ಡದ ಮೇಲೆ ಶ್ರೀ ಕೃಷ್ಣದೇವರಾಯನ ಪ್ರತಿಮೆ ಸೂಕ್ತ

## 'ನಮ್ಮ ಕೆರೆ, ನಮ್ಮ ಹಕ್ಕು' ಸಂಚಾಲಕ ಅಂಚೆ ಕೊಟ್ರೇಶ್

**ಕೊಟ್ಟೂರು**

ಕೊಟ್ಟೂರು, ಜ.8- ಹೊಸಪೇಟೆಯ ಜೋಳದ ರಾಶಿ ಗುಡ್ಡದ ಮೇಲೆ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀ ಕೃಷ್ಣದೇವರಾಯನ ಪ್ರತಿಮೆ ಸ್ಥಾಪಿಸುವುದು ಸೂಕ್ತ ಎಂದು ಕೊಟ್ಟೂರಿನ ನಮ್ಮ ಕೆರೆ ನಮ್ಮ ಹಕ್ಕು ಸಂಚಾಲಕ ಅಂಚೆ ಕೊಟ್ರೇಶ್ ತಿಳಿಸಿದರು.

ಅವರು ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಅರಣ್ಯ ಸಚಿವ ಆನಂದ್‌ಸಿಂಗ್ ಅವರಿಗೆ ಬರೆದಿರುವ ಪತ್ರವನ್ನು ಪ್ರಸ್ತಾಪಿಸಿ, ಮೂರ್ತಿ ಎಂದೊಡನೆ ಮೂಗು ಮುರಿಯುವ ಕಾಲ ಇದಾಗಿದೆ. ಭಗ್ನಗೊಳಿಸುವ ವಿಕೃತ ಮನಸ್ಸುಗಳು ಹುಟ್ಟಿಕೊಂಡು ಪ್ರತಿಮೆಯ ಮೇಲಿನ ಪ್ರೀತಿ ಕಡಿಮೆಯಾಗಿದೆ ಎಂದರು.

ಈ ದೃಷ್ಟಿಯಿಂದ ನೋಡಿದಲ್ಲಿ ಹೊಸಪೇಟೆಯ ಜೋಳದ ರಾಶಿ ಗುಡ್ಡದ ಮೇಲೆ ಯಾವ ಪ್ರತಿಮೆಗಳೂ ಬೇಡ ಎನ್ನುವವರಲ್ಲಿ ನಾನೂ ಒಬ್ಬ, ಆದರೆ ಸರ್ಕಾರ ಈಗಾಗಲೇ ಇದಕ್ಕೆ ಸಿದ್ಧವಾಗಿದ್ದರೆ ಅಲ್ಲಿ ತನ್ನ ನೆಲ, ಜಲ, ಸಾಹಿತ್ಯ, ಸಂಸ್ಕೃತಿ, ರಾಜ್ಯಾಡಳಿತದ ವೈಖರಿಯನ್ನು ವಿಶ್ವಾದ್ಯಂತ ಈಗಲೂ ನೆನಪಲ್ಲಿ ಇಡುವಂತೆ ಮಾಡಿದ ಚಕ್ರವರ್ತಿ ಶ್ರೀ ಕೃಷ್ಣದೇವರಾಯನ ಪುತ್ಥಳಿ ಸ್ಥಾಪಿಸುವುದು ಸೂಕ್ತ ಎಂದು ತಿಳಿಸಿದ್ದಾರೆ.

# ನಗರದಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ನಿರ್ದೇಶಕ ಮಹಾಂತೇಶ ಪಾಟೀಲ್



ದಾವಣಗೆರೆ, ಜ.8- ಅಖಿಲ ಭಾರತ ವೀರಶೈವ ಮಹಾಸಭಾ ಯುವ ಘಟಕದ ರಾಷ್ಟ್ರೀಯ ಅಧ್ಯಕ್ಷರೂ ಹಾಗೂ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ನಿರ್ದೇಶಕ ಮಹಾಂತೇಶ ಪಾಟೀಲ್ ನಗರಕ್ಕೆ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರನ್ನು ಭೇಟಿಯಾಗಿ ಸಮಾಜದ ಸಂಘಟನೆಯ ಬಗ್ಗೆ ಚರ್ಚಿಸಿದರು. ಯುವ ಘಟಕದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಖಿಲ್ ಕೊಂಡಜ್ಜಿ, ಉಪಾಧ್ಯಕ್ಷ ಸಂದೀಪ್ ಅಣಬೇರು, ಜಿಲ್ಲಾಧ್ಯಕ್ಷ ಆರ್.ಟಿ. ಪ್ರಶಾಂತ್, ನಗರ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಶಿವನಗೌಡ ಪಾಟೀಲ, ಟಿಂಕರ್ ಮಂಜಣ್ಣ, ಗಂಗಾಧರ್, ಎಲ್.ಎಸ್.ದೇವೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಹಿರಿಯ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ ರಚನೆ





ದಾವಣಗೆರೆ, ಜ.8- ಶ್ರೀ ಜಯದೇವ ವೃತ್ತದ ಬಳಿಯ ಕಾರಿಗನೂರು ಪರಮೇಶ್ವರಪ್ಪ ಕಾಂಪ್ಲೆಕ್ಸ್ ನಲ್ಲಿ ಹಿರಿಯ ಪತ್ರಕರ್ತರಾದ ಎಸ್.ಬಿ.ಜಿನದತ್ತ ಹಾಗೂ ಬಕ್ಕೇಶ್ ನಾಗನೂರು ಅವರುಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಹಿರಿಯ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘವನ್ನು ಅಸ್ತಿತ್ವಕ್ಕೆ ತರಲಾಯಿತು.

ಅಧ್ಯಕ್ಷರಾಗಿ ಎಸ್.ಬಿ.ಜಿನದತ್ತ, ಉಪಾಧ್ಯಕ್ಷರುಗಳಾಗಿ ಬಕ್ಕೇಶ್ ನಾಗನೂರು, ಎಸ್.ಪರಮೇಶ್ವರಪ್ಪ, ಕಾರ್ಯದರ್ಶಿಯಾಗಿ ಐ.ಗುರುಶಾಂತಪ್ಪ, ಸಹಕಾರ್ಯದರ್ಶಿಯಾಗಿ ಬಸವರಾಜ್ ಐರಣಿ, ಸಂಘಟನಾ ಕಾರ್ಯದರ್ಶಿ ಆರ್.ಎಸ್.ತಿಪ್ಪೇಸ್ವಾಮಿ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರುಗಳಾಗಿ ಎಂ.ಎಸ್.ಶಿವಶರಣಪ್ಪ, ಬಾಬು ದಾಮೋದರ್, ಸುಬ್ರಮಣ್ಯ ನಾಡಿಗ್ ಅವರುಗಳೂ ಸಹ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಸಂಘದ ಕಾರ್ಯದರ್ಶಿ ಐ.ಗುರುಶಾಂತಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ


ಭಾಷನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾಕ್ ಸರ್ಕಲ್, ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇಎಸ್ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷಾ ನಗರ ಮುಖ್ಯರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕುರಿ ಸಾಕಾಣಿಕೆ ತರಬೇತಿ

ದಾವಣಗೆರೆ ಜ.8 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಯ ಉಚಿತ ತರಬೇತಿಯು ಇದೇ ದಿನಾಂಕ 11 ರಿಂದ 13 ರವರೆಗೆ ನಗರದ ಪಶು ಆಸ್ಪತ್ರೆಯಲ್ಲಿ ನಡೆಯಲಿದೆ. ಸಂಪರ್ಕಿಸಿ : 08192-233787

# ಸ್ವಂತ ಕಟ್ಟಡದೊಂದಿಗೆ ಪ್ರಗತಿಯ ಮುಂಚೂಣಿಯ ಹೆಗ್ಗಳಿಕೆಯಲ್ಲಿ ಕರಾವಳಿ ಸೌಹಾರ್ದ ಸಹಕಾರಿ

## ಸಂಘದ 20ನೇ ವಾರ್ಷಿಕ ಸಭೆಯಲ್ಲಿ ಹಿರಿಯ ಲೆಕ್ಕ ಪರಿಶೋಧಕರೂ ಆಗಿರುವ ಸಂಘದ ಅಧ್ಯಕ್ಷ ಉಮೇಶ್ ಶೆಟ್ಟಿ



ದಾವಣಗೆರೆ, ಜ. 8- ಸಹಕಾರಿ ಸಂಘವೊಂದು ಕೋಟ್ಯಾಂತರ ರೂ. ಮೌಲ್ಯದ ಸ್ವಂತ ಕಟ್ಟಡ ಹೊಂದಿ ಪ್ರಗತಿಯ ಮುಂಚೂಣಿಯಲ್ಲಿರುವ ಏಕೈಕ ಸಹಕಾರಿ ಎಂಬ ಹೆಗ್ಗಳಿಕೆಗೆ ನಗರದ ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಪಾತ್ರವಾಗಿದೆ ಎಂದು ಹಿರಿಯ ಲೆಕ್ಕ ಪರಿಶೋಧಕರೂ ಆಗಿರುವ ಸಂಘದ ಅಧ್ಯಕ್ಷ ಸಿಎ ಉಮೇಶ್ ಶೆಟ್ಟಿ ಸಂತಸ ವ್ಯಕ್ತಪಡಿಸಿದ್ದಾರೆ.

ಸಂಘದ ನೂತನ ಕಟ್ಟಡದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಸಹಕಾರಿಯ 2019-20ನೇ ಸಾಲಿನ 20ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಂದುವಾಡ ರಸ್ತೆಯಲ್ಲಿ ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ ವಿಶಾಲವಾಗಿ ತನ್ನ ಸ್ವಂತ ಕಟ್ಟಡವನ್ನು ನಿರ್ಮಿಸಿಕೊಂಡಿರುವ ಕರಾವಳಿ ಸೊಸೈಟಿಯು ವರದಿ ಸಾಲಿನಲ್ಲೇ ಉದ್ಘಾಟನೆಯನ್ನೂ ನೆರವೇರಿಸಿಕೊಂಡಿದೆ. ಈ ಸಾಧನೆಯು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿರುವುದನ್ನು ಪ್ರತಿಬಿಂಬಿಸುತ್ತದೆ ಎಂದು ಉಮೇಶ್ ಶೆಟ್ಟಿ ಹರ್ಷಿಸಿದರು.

2020ರ ಮಾರ್ಚ್ ಅಂತ್ಯಕ್ಕೆ ಸಹಕಾರಿಯು 14.35 ಲಕ್ಷ ರೂ. ಸವಕಳಿ ಕಳೆದು 52 ಲಕ್ಷ ರೂ. ಲಾಭ ಗಳಿಸಿದ್ದು, ತನ್ನ ಸದಸ್ಯರಿಗೆ ಶೇ. 14ರಂತೆ ಲಾಭಾಂಶ ನೀಡಲು ಸಂಘದ ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಅವರು ಸಭಿಕರ ಚಪ್ಪಾಳೆಗಳ ಮಧ್ಯ ಘೋಷಿಸಿದರು.

ಸಹಕಾರಿಯ ಸ್ವಂತ ನಿಧಿ 6.78 ಕೋಟಿ ರೂ.ಗಳಾಗಿದ್ದು, 23.21 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಸದಸ್ಯರಿಗೆ ವಿವಿಧ ಉದ್ದೇಶಗಳಿಗಾಗಿ 19.19 ಕೋಟಿ ರೂ. ಸಾಲ ಸೌಲಭ್ಯ ಒದಗಿಸಿದೆ. ಅಲ್ಲದೇ, ಸಂಘದ ನೌಕರರಿಗೆ ಇಎಸ್ಐ ಮತ್ತು ಗ್ರ್ಯಾಚ್ಯುಟಿ ಸೌಲಭ್ಯ ಕಲ್ಪಿಸಲಾಗಿದೆ. ವರದಿ ಸಾಲಿನಲ್ಲಿ ನಿಧನರಾದ ಇಬ್ಬರು ಸದಸ್ಯರ ಕುಟುಂಬಕ್ಕೆ 10 ಸಾವಿರ ರೂ.ಗಳನ್ನು ಮರಣೋತ್ತರ ಪರಿಹಾರ ನೀಡಲಾಗಿದೆ ಎಂದು ಅವರು ಸಂಘದ ಪ್ರಗತಿಯ ಪಕ್ಷಿನೋಟವನ್ನು ಅಂಕಿ-ಅಂಶಗಳೊಂದಿಗೆ ವಿವರಿಸಿದರು.

ಸಹಕಾರಿಯ ಸದಸ್ಯರು, ಗ್ರಾಹಕರ ಪ್ರೀತಿ-ನಂಬಿಕೆ-ವಿಶ್ವಾಸ, ಸಿಬ್ಬಂದಿ ವರ್ಗ - ಪಿಗ್ಮಿ ಸಂಗ್ರಹಕಾರರ ಪರಿಶ್ರಮ, ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಇಚ್ಛಾಶಕ್ತಿಯಿಂದಾಗಿ ತಮ್ಮ ಸಂಘವು ಪ್ರಗತಿಯಲ್ಲಿದೆ ಎಂದು ತಿಳಿಸಿದ ಉಮೇಶ್ ಶೆಟ್ಟಿ ಅವರು, ಇದಕ್ಕೆ ಕಾರಣರಾದ ಎಲ್ಲರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರೋತ್ಸಾಹಿಸುವ ಯೋಜನೆಯಡಿಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ 2 ಸಾವಿರ ರೂ. ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ 2,500 ರೂ.ಗಳ ಪ್ರೋತ್ಸಾಹ ಧನವನ್ನು ಸಮಾರಂಭದಲ್ಲಿ ನೀಡುವುದರ ಮೂಲಕ ಸತ್ಕರಿಸಲಾಯಿತು.

ಇದೇ ಸಂದರ್ಭದಲ್ಲಿ, ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾಗಿ ಈಚೆಗೆ ನೇಮಕಗೊಂಡಿರುವ ಸಂಘದ ಈ ಹಿಂದಿನ ಲೆಕ್ಕ ಪರಿಶೋಧಕರಾದ ಸಿಎ ಕಿರಣ್‌ಕುಮಾರ್ ಶೆಟ್ಟಿ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಸಂಘದ ಉಪಾಧ್ಯಕ್ಷ ಮಹೇಶ್ ಆರ್. ಶೆಟ್ಟಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರೂ ಆಗಿರುವ ಸಂಘದ ಹಿರಿಯ ನಿರ್ದೇಶಕ ದಿನೇಶ್ ಕೆ. ಶೆಟ್ಟಿ, ನಿರ್ದೇಶಕರುಗಳಾದ ರವೀಂದ್ರ ಎಸ್. ಶೆಟ್ಟಿ, ಎಸ್. ಸೀತಾರಾಂ ಶೆಟ್ಟಿ, ಕೆ. ಮೋಹನ್‌ದಾಸ್ ಶೆಟ್ಟಿ, ಡಾ. ಸುಬೋದ್ ಎಸ್. ಶೆಟ್ಟಿ, ಶ್ರೀಮತಿ ಆಶಾ ಕೆ. ಶೆಟ್ಟಿ, ಶ್ರೀಮತಿ ವಿಮಲಾ ಎಸ್.ಶೆಟ್ಟಿ, ಹೆಚ್. ಎಲ್. ವೆಂಕಟೇಶ್, ವಿಶೇಷ ಆಹ್ವಾನಿತರಾದ ಬಿ. ಸದಾಶಿವ ಶೆಟ್ಟಿ, ಡಾ. ಸುರೇಶ್ ಶೆಟ್ಟಿ, ಅರುಣ ಕುಮಾರ್ ಶೆಟ್ಟಿ, ಎಂ. ಪ್ರಭಾಕರ ಶೆಟ್ಟಿ, ಕಿಷನ್ ಚಂದ್ರ ಶೆಟ್ಟಿ ಮುಂತಾದವರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಖಲೀಲ್ ಅಹ್ಮದ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

# ಹಸಿವಿಗೆ ಅನ್ನ ಎಷ್ಟು ಮುಖ್ಯವೋ, ಸಾಕ್ಷರತೆಯ ಅರಿವು ಕೂಡ ಅಷ್ಟೇ ಮುಖ್ಯ



ಹರಪನಹಳ್ಳಿ, ಜ.8 - ಹಸಿವಿಗೆ ಅನ್ನ ಎಷ್ಟು ಮುಖ್ಯವೋ ಸಾಕ್ಷರತೆಯ ಅರಿವು ಅಷ್ಟೇ ಮುಖ್ಯ. ಪುಲೆ ದಂಪತಿ ಅಂದು ಹಚ್ಚಿದ ಸಾಕ್ಷರತಾ ಜ್ವಾಲೆ ನಿರಂತರವಾಗಿ ಬೆಳಗುತ್ತಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಹಕಾರ್ಯದರ್ಶಿ ಬಸವರಾಜ್ ಸಂಗಪ್ಪನವರ್ ಹೇಳಿದರು.

ಪಟ್ಟಣದ ಬಿಸಿಎಂ ಹಾಸ್ಟೆಲ್ ಸಭಾಂಗಣದಲ್ಲಿ ವಿಶ್ವಚೇತನ ಸಂಸ್ಥೆ, ಲಡಾಯಿ ಪ್ರಕಾಶನದ ಸಹಯೋಗದಲ್ಲಿ ಸಾವಿತ್ರಿ ಬಾಯಿ ಪುಲೆ ಜನ್ಮ ದಿನಾಚರಣೆಯಲ್ಲಿ ಪುಸ್ತಕ ವಿತರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತದ ಮಹಾನ್ ಚೇತನಗಳಾದ ಮಹತ್ಮಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರಿಗೂ ಮುಂಚಿತವಾಗಿ ಜನಿಸಿದ್ದ ಸಾವಿತ್ರ ಬಾಯಿ ಪುಲೆ ಅವರು, ಮೇಲ್ವರ್ಗದವರ ತೀವ್ರ ವಿರೋಧದ ನಡುವೆಯೂ ಶಾಲೆಯನ್ನು ತೆರೆದು ಮಹಿಳೆಯರಿಗೆ ಶಿಕ್ಷಣ ಕೊಡಿಸಿ, ಅಕ್ಷರಸ್ಥರನ್ನಾಗಿ ಮಾಡಿದ್ದಾರೆ. ಈ ಮೂಲಕ ಬ್ರಿಟಿಷರಿಂದ ಭಾರತ ಮೊದಲ ಮಹಿಳಾ ಶಿಕ್ಷಕಿ ಎನ್ನುವ ಬಿರುದಿಗೆ ಪಾತ್ರರಾಗಿದ್ದರು. ಶಿಕ್ಷಣ, ಸಾಕ್ಷರತೆ ಜಗತ್ತನ್ನು ನೋಡುವ ಕಿಟಕಿಗಳಾಗಿವೆ. ಭೂತಕಾಲ, ವರ್ತಮಾನ, ಭವಿಷತ್ ಕಾಲದ ಪ್ರಜ್ಞೆಯಲ್ಲಿ ಬದುಕುವವರು ಏನಾದರೂ ಸಾಧನೆ ಮಾಡುತ್ತಾರೆ ಎಂದರು.

ಸಾವಿತ್ರಿ ಅವರ ಕುಟುಂಬ ಹೆರಿಗೆ ಕೇಂದ್ರ, ವಿಧವೆಯರಿಗೆ ಪುನರ್ವಸತಿ ಕಲ್ಪಿಸಿ ನಾಡಿನ ಗಮನ ಸೆಳೆದಿದ್ದಾರೆ. ಅಂತಹ ಸಾಧಕಿ ಮಹಿಳೆಯ ಸಾಧನೆ ಕೆಲ ವರ್ಷಗಳಿಂದೀಚೆಗೆ ಪ್ರವರ್ಧಮಾನಕ್ಕೆ ಬಂದಿದೆ ಎಂದರು. ಗದಗ ಲಡಾಯಿ ಪ್ರಕಾಶನದ ಬಸವರಾಜ್ ಅವರಿಂದ ಸಾವಿತ್ರಿ ಬಾಯಿ ಪುಲೆ ಪುಸ್ತಕಗಳನ್ನು ಎರಡು ವಸತಿ ನಿಲಯಗಳಿಗೆ ಕೊಡುಗೆಯಾಗಿ ನೀಡಲಾಯಿತು.

ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ಎನ್.ಜಿ.ಬಸವರಾಜ್, ಬಿಸಿಎಂ ಹಾಸ್ಟೆಲ್ ಮೇಲ್ವಿಚಾರಕ ಬಿ.ಎಚ್.ಚಂದ್ರಪ್ಪ, ಜೆಸಿಐ ಸ್ಫೂರ್ತಿ ಸಂಸ್ಥೆ ಅಧ್ಯಕ್ಷ ಟಿ.ಎಂ.ವೀರೇಶ್ ಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಡಿ.ವಿಶ್ವನಾಥ್ ಸೇರಿದಂತೆ ಇತರರು ಇದ್ದರು.

# ನಗರದಲ್ಲಿ ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಭಾಷನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾಕ್ ಸರ್ಕಲ್, ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ್ ನಗರ, ಇಎಸ್ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷಾ ನಗರ ಮುಖ್ಯರಸ್ತೆ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

# ಅಯೋಧ್ಯೆ : ಮಸೀದಿ ಧ್ವಂಸದ ಆರೋಪಿ ಖುಲಾಸೆ ಪ್ರಶ್ನಿಸಿ ಅರ್ಜಿ

ಲಖ್ನೌ, ಜ. 8 – ಅಯೋಧ್ಯೆ ವಿವಾದಿತ ಕಟ್ಟಡ ಧ್ವಂಸ ಪ್ರಕರಣದಲ್ಲಿ ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅದ್ವಾನಿ ಸೇರಿದಂತೆ 32 ಜನರನ್ನು ಸಿಬಿಐ ವಿಶೇಷ ನ್ಯಾಯಾಲಯ ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಅಯೋಧ್ಯೆಯ ಇಬ್ಬರು ಹೈಕೋರ್ಟ್ ಮೊರೆ ಹೋಗಿದ್ದಾರೆ.

ಅಯೋಧ್ಯೆ ನಿವಾಸಿಗಳಾದ ಹಾಜಿ ಮಹಬೂಬ್ ಹಾಗೂ ಹಾಜಿ ಸಯ್ಯದ್ ಅಖ್ಲಾಕ್ ಅಹಮದ್ ಅವರು ಹೈಕೋರ್ಟ್‌ನ ಲಖ್ನೌ ಪೀಠದಲ್ಲಿ ಆಲ್ ಇಂಡಿಯಾ ಮುಸ್ಲಿಮ್ ಪರ್ಸನಲ್ ಲಾ ಬೋರ್ಡ್ ಪರವಾಗಿ ಅರ್ಜಿ ದಾಖಲಿಸಿದ್ದಾರೆ.

ವಿಶೇಷ ನ್ಯಾಯಾಲಯ ಆರೋಪಿಗಳನ್ನು ಖುಲಾಸೆಗೊಳಿಸಿದ್ದರ ವಿರುದ್ಧ ಸಿಬಿಐ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರಲಿಲ್ಲ. ಹೀಗಾಗಿ ಈ ಇಬ್ಬರು ಅರ್ಜಿ ಸಲ್ಲಿಸಲು ನಿರ್ಧರಿಸಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ಹೇಳಿದ್ದಾರೆ.

28 ವರ್ಷಗಳ ಹಿಂದೆ ವಿವಾದಿತ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಲಾಗಿತ್ತು.

ಕಳೆದ ವರ್ಷ ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿತ್ತು.

# ಡಿವೈಎಸ್ಪಿ ಬಸವರಾಜ್- ಮುಖ್ಯಪೇದೆ ರಾಮಚಂದ್ರಗೆ ರಾಷ್ಟ್ರಪತಿ ಪದಕ




ದಾವಣಗೆರೆ, ಜ.8- ಪೊಲೀಸ್ ಇಲಾಖೆಯಲ್ಲಿ ಅತ್ಯುನ್ನತ ಸೇವೆಯನ್ನು ಪರಿಗಣಿಸಿ ನೀಡಲಾಗುವ 2019 ರ ರಾಷ್ಟ್ರಪತಿ ಪದಕಕ್ಕೆ ಜಿಲ್ಲಾ ಪೊಲೀಸ್ ನ ಡಿಸಿಆರ್ ಬಿ ಡಿವೈಎಸ್ಪಿ ಬಿ.ಎಸ್. ಬಸವರಾಜ್ ಮತ್ತು ಜಿಲ್ಲಾ ಪೊಲೀಸ್ ಕಚೇರಿ ಗಣಕ ಯಂತ್ರ ವಿಭಾಗದ ಹೆಡ್ ಕಾನ್ಸ್ ಟೇಬಲ್ ರಾಮಚಂದ್ರ ಬಿ. ಜಾಧವ್ ಭಾಜನರಾಗಿದ್ದಾರೆ.

ಬೆಂಗಳೂರಿನ ರಾಜಭವನದಲ್ಲಿ ನಿನ್ನೆ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯಪಾಲರಿಂದ ಬಸವರಾಜ್ ಮತ್ತು ರಾಮಚಂದ್ರ ಅವರುಗಳು ರಾಷ್ಟ್ರಪತಿ ಪದಕ ಸ್ವೀಕರಿಸಿದ್ದಾರೆ.

ರಾಷ್ಟ್ರಪತಿ ಪದಕ ವಿಜೇತ ಬಸವರಾಜ್ ಮತ್ತು ರಾಮಚಂದ್ರ ಅವರುಗಳನ್ನು ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಅಭಿನಂದಿಸಿದ್ದಾರೆ.

# ನೀಲಗುಂದ ಜಯಮ್ಮ ಅವರಿಗೆ 'ಕದಳಿ ಶ್ರೀ' ಪ್ರಶಸ್ತಿ ಪ್ರದಾನ

ದಾವಣಗೆರೆ,ಜ.8- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆ ಕದಳಿ ಮಹಿಳಾ ವೇದಿಕೆಯ ಪ್ರತಿಷ್ಠಿತ 'ಕದಳಿ ಶ್ರೀ' ಪ್ರಶಸ್ತಿಯನ್ನು ಸಾಮಾಜಿಕ ಸೇವಾ ಕಾರ್ಯಕರ್ತರಾದ ಶ್ರೀಮತಿ ನೀಲಗುಂದ ಜಯಮ್ಮ ಅವರಿಗೆ ಪ್ರದಾನ ಮಾಡಲಾಯಿತು.

ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮತ್ತು ಪ್ರತಿಭಾನ್ವಿತ ಮಹಿಳೆಯರಿಗೆ ಕದಳಿ ವೇದಿಕೆಯು ಪ್ರತಿ ವರ್ಷ ತನ್ನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕೊಡ ಮಾಡುವ 'ಕದಳಿ ಶ್ರೀ' ಪ್ರಶಸ್ತಿಯನ್ನು 2021ನೇ ಸಾಲಿಗೆ ನೀಲಗುಂದ ಜಯಮ್ಮ ಅವರಿಗೆ ನೀಡಲಾಗಿದೆ.

ಕೊರೊನಾ ವೈರಸ್ - 19 ಹಿನ್ನೆಲೆಯಲ್ಲಿ ಸರ್ಕಾರ ಮಾಡಿರುವ ಮಾರ್ಗಸೂಚಿಯ ಕಾರಣದಿಂದಾಗಿ ರಚಿಸಲಾಗಿದ್ದ ವಾಟ್ಸಾಪ್ ಗುಂಪಿನಲ್ಲಿ ನೀಲಗುಂದ ಜಯಮ್ಮ ಅವರಿಗೆ ಶಾಲು ಹೊದಿಸಿ, ಸನ್ಮಾನಿಸಿ, 'ಕದಳಿ ಶ್ರೀ' ಫಲಕ, ಫಲ -ಪುಷ್ಪ, ಸ್ಮರಣಿಕೆಯೊಂದಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕದಳಿ ವೇದಿಕೆಯ ಹಿರಿಯ ಸದಸ್ಯರುಗಳಲ್ಲೊಬ್ಬರಾದ ಶ್ರೀಮತಿ ಯಶಾ ದಿನೇಶ್ ಅವರು ತಮ್ಮ ತಾಯಿ ಶ್ರೀಮತಿ ಸಾವಿತ್ರಮ್ಮ ಮತ್ತು ತಂದೆ ರೊ. ಪ್ರೊ. ಬಿ.ಕೆ .ಸಿದ್ದಪ್ಪ (ಬಾಡಾ) ದಂಪತಿ ಹೆಸರಿನಲ್ಲಿ 'ಕದಳಿ ಶ್ರೀ' ಪ್ರಶಸ್ತಿ ದತ್ತಿಯನ್ನು ಸ್ಥಾಪಿಸಿದ್ದು, ಈ ಪ್ರಶಸ್ತಿಯು ಕದಳಿ ವೇದಿಕೆಯಲ್ಲಿ ತನ್ನದೇ ಆದ ಪ್ರತಿಷ್ಠಿತೆ ಪಡೆದುಕೊಂಡಿದೆ.

ನೀಲಗುಂದ ಜಯಮ್ಮ ಅವರಿಗೆ 'ಕದಳಿ ಶ್ರೀ' ಪ್ರಶಸ್ತಿಯನ್ನು ಪ್ರದಾನ ಮಾಡಿದ ನಂತರ ಮಾತನಾಡಿದ ಅತಿಥಿ ಗಣ್ಯರು,



ಶಾಲಾ ಶಿಕ್ಷಕರಾಗಿ ನಿವೃತ್ತರಾದ ನಂತರವೂ ತಮ್ಮ ಇಳಿ ವಯಸ್ಸಿನಲ್ಲೂ ಮಹಿಳಾ ಸಂಘಟನೆ ಸೇರಿದಂತೆ ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗುವುದರ ಮೂಲಕ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕದಳಿ ವೇದಿಕೆ ಗೌರವಾಧ್ಯಕ್ಷರಾದ ಶ್ರೀಮತಿ ಜಯಶೀಲ ಷಡಾಕ್ಷರಪ್ಪ ಅವರನ್ನೂ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಈ ವೇದಿಕೆಯಲ್ಲಿ ಹಿರಿಯ ಸದಸ್ಯರಾಗಿದ್ದುಕೊಂಡು ಪದಾಧಿಕಾರಿಗಳಿಗೆ ಸೂಕ್ತ ಸಲಹೆ - ಸೂಚನೆ - ಮಾರ್ಗದರ್ಶನ ಮಾಡುತ್ತಿರುವ ಜಯಶೀಲ ಹೆಚ್ಚೆನ್ನೆಸ್ ಅವರ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಲಾಯಿತು.

ಇದೇ ಸಂದರ್ಭದಲ್ಲಿ 2020ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಅವರನ್ನೂ ಗೌರವಿಸಲಾಯಿತು. ಸನ್ಮಾನಕ್ಕೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಡಾ. ಈಶ್ವರಪ್ಪ, 12ನೇ ಶತಮಾನದ ಅಕ್ಕಮಹಾದೇವಿ ಯಂತಹ ಧೀಮಂತ ಮಹಿಳೆ ಸ್ತ್ರೀ ಕುಲಕ್ಕೆ ಆದರ್ಶ ಎಂದು ಬಣ್ಣಿಸಿದರು.

ಕದಳಿ ಮಹಿಳಾ ವೇದಿಕೆಯು ತನ್ನ 12ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, ಕೊರೊನಾ ವೈರಸ್ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸೇವೆ ಸಲ್ಲಿಸಿದ ಮಹಿಳಾ ವೈದ್ಯರು ಮತ್ತು ಸಮಾಜ ಸೇವಕರನ್ನು ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಅರಿವಳಿಕೆ ತಜ್ಞರಾದ ಡಾ. ಉಮಾ ಪ್ರಸನ್ನ ಅವರು ಮಾತನಾಡಿ, ಕದಳಿ ಮಹಿಳಾ ವೇದಿಕೆಯ ಕಾರ್ಯ ಚಟುವಟಿಕೆಗಳು, ಸನ್ಮಾನಿತರ ಸಾಮಾಜಿಕ ಸೇವೆಯನ್ನು ಮೆಲುಕು ಹಾಕಿದರಲ್ಲದೇ, ಕದಳಿ ವೇದಿಕೆ ಸಮಾಜದಲ್ಲಿ ಸದಾ ಪ್ರಜ್ವಲಿಸುವಂತಾಗಲಿ ಎಂದು ಹಾರೈಸಿದರು.

ಕದಳಿ ವೇದಿಕೆಯ ಶ್ರೀಮತಿ ಟಿ. ನೀಲಾಂಬಿಕಾ, ಶ್ರೀಮತಿ ಕಂಚಿಕೆರೆ ಸುಶೀಲಮ್ಮ, ಶ್ರೀಮತಿ ಸುವರ್ಣ ದೊಗ್ಗಳ್ಳಿ, ಶ್ರೀಮತಿ ಪಂಕಜಾ ದಯಾನಂದ್, ಶ್ರೀಮತಿ ಪ್ರಮೀಳಾ ನಟರಾಜ್, ಶ್ರೀಮತಿ ಸುಧಾ ದಿಬ್ಬಳ್ಳಿ, ಶ್ರೀಮತಿ ಸುಜಾತ ರವೀಂದ್ರ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಚನ ತಂಡದ ಸದಸ್ಯರ ಪ್ರಾರ್ಥನೆಯ ನಂತರ ಶ್ರೀಮತಿ ನಿರ್ಮಲಾ ಶಿವಕುಮಾರ್ ಸ್ವಾಗತಿಸಿದರು. ಶ್ರೀಮತಿ ಕುಸುಮಾ ಲೋಕೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀಮತಿ ರತ್ನ ಸಿ. ರೆಡ್ಡಿ, ಶ್ರೀಮತಿ ವಿಜಯಲಕ್ಷ್ಮಿ ಬಸವರಾಜ್, ಶ್ರೀಮತಿ ಪೂರ್ಣಿಮಾ ಪ್ರಸನ್ನ, ಶ್ರೀಮತಿ ವಿಜಯಾ ಚಂದ್ರಶೇಖರ್ ಅವರುಗಳು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀಮತಿ ಆಶಾ ಮಹಾಬಲೇಶ್ವರ್ ವಂದಿಸಿದರು.

ಶ್ರೀಮತಿ ಸೌಮ್ಯ ಸತೀಶ್ ಸ್ಪರ್ಧಾ ವಿಜೇತರ ಪಟ್ಟಿಯನ್ನು ಪ್ರಕಟಿಸಿದರು. ಶ್ರೀಮತಿ ಮಮತಾ ನಾಗರಾಜ್, ಶ್ರೀಮತಿ ಚಂದ್ರಿಕಾ ಮಂಜುನಾಥ್, ಶ್ರೀಮತಿ ಗಾಯತ್ರಿ ವಸ್ತ್ರದ್, ಶ್ರೀಮತಿ ರೇಖಾ ಓಂಕಾರಪ್ಪ, ಶ್ರೀಮತಿ ವಿನೋದ ಅಜಗಣ್ಣನವರ್ ಅವರುಗಳು ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶ್ರೀಮತಿ ಪಲ್ಲವಿ ಪಾಟೀಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಉಜ್ವಲಾ ಸುಭಾಷ್ ಮತ್ತು ತಂಡದವರು, ಶ್ರೀಮತಿ ಪೂರ್ಣಿಮಾ ಪ್ರಸನ್ನ ಮತ್ತು ತಂಡದವರು ವಚನ ನೃತ್ಯ, ಶ್ರೀಮತಿ ಮಮತಾ ನಾಗರಾಜ್ ಮತ್ತು ತಂಡದವರು ಕಿರು ನಾಟಕವನ್ನು ಪ್ರಸ್ತುತಪಡಿಸಿದರು.

ಕದಳಿ ವೇದಿಕೆಗೆ 2021ನೇ ಸಾಲಿನ ಗೌರವಾಧ್ಯಕ್ಷರಾಗಿ ಶ್ರೀಮತಿ ಶಂಶಾದ್ ಬೇಗಂ, ಜಿಲ್ಲಾಧ್ಯಕ್ಷರಾಗಿ ಶ್ರೀಮತಿ ಆಶಾ ಮಹಾಬಲೇಶ್ವರ್ ಆಯ್ಕೆಯಾಗಿದ್ದು, ಶ್ರೀಮತಿ ಕೆ.ಆರ್. ವಸಂತ ಪದಗ್ರಹಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

# ಆಸ್ತಿ ತೆರಿಗೆ ಹೆಚ್ಚಳ ಖಂಡಿಸಿ ಜಿಲ್ಲಾ ಕಾಂಗ್ರೆಸ್‌ನಿಂದ ಧರಣಿ

ದಾವಣಗೆರೆ, ಜ.8- ಆಸ್ತಿ ತೆರಿಗೆ ಹೆಚ್ಚಳ ವಿರೋಧಿಸಿ ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇಂದು ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರ ಪಾಲಿಕೆ ಮುಂಭಾಗದಲ್ಲಿ ಧರಣಿ ಹೂಡಿದ್ದ ಪ್ರತಿಭಟನಾ ನಿರತರು, ಕೊರೊನಾ ಸಂದರ್ಭದಲ್ಲೂ ಆಸ್ತಿ ತೆರಿಗೆ ಹೆಚ್ಚಿಸಿರುವುದನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಈ ಹಿಂದೆ ರಾಜ್ಯದಲ್ಲಿ ತೀವ್ರ ಮಳೆ ಕಾರಣ ಆಸ್ತಿ ತೆರಿಗೆ ಹೆಚ್ಚಳಕ್ಕೆ ವಿರೋಧಿಸಲಾಯಿತು. ನಂತರ ಜನಪ್ರತಿನಿಧಿಗಳು ಇಲ್ಲದ ವೇಳೆ ಜಿಲ್ಲಾಧಿಕಾರಿಗಳು ಆಸ್ತಿ ತೆರಿಗೆ ಹೆಚ್ಚಳಕ್ಕೆ ಅನುಮೋದನೆ ನೀಡಿದರು. ರಾಜ್ಯ ಸರ್ಕಾರ ಮತ್ತೊಮ್ಮೆ ಆಸ್ತಿ ತೆರಿಗೆ ಹೆಚ್ಚಳ ಮಾಡಲು ಹೊರಡುವ ಮೂಲಕ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇವಲ 2-3 ಕೋಟಿ ರೂ. ವೆಚ್ಚದಲ್ಲಿ ನಗರಕ್ಕೆ ನೀರು ಸರಬರಾಜು ಮಾಡುವ ಕುಂದವಾಡ ಕೆರೆಯನ್ನು ಅಭಿವೃದ್ಧಿಗೊಳಿಸಲಾಯಿತು. ಅಂದು ಕುಂದವಾಡ ಕೆರೆಯನ್ನು ವಿರೋಧಿಸಿದ ಬಿಜೆಪಿಯವರು ಕೆರೆ ಅಭಿವೃದ್ಧಿ ಹೆಸರಿನಲ್ಲಿ ಲೂಟಿಗೆ ಇಳಿದಿದ್ದಾರೆ ಎಂದು ದೂರಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜನ ಹಿತ ಸರ್ಕಾರಗಳಲ್ಲ, ಜನವಿರೋಧಿ ಸರ್ಕಾರಗಳು ಕಣ್ಣು-ಕಿವಿ ಇಲ್ಲದ ದಪ್ಪ ಚರ್ಮದ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕೆಂದರೆ ನ್ಯಾಯಾಲಯದ ಮೊರೆ ಹೋಗಬೇಕು ಎಂದು ಸಲಹೆ ನೀಡಿದರು.

ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ,



ಅತಿವೃಷ್ಟಿ ವೇಳೆ ಆಸ್ತಿ ತೆರಿಗೆ ಹಾಕದಂತೆ ನಿರ್ಣಯ ಕೈಗೊಳ್ಳಲಾಗಿತ್ತು. ಆದರೂ ಸಹ ಕಳೆದ ಫೆಬ್ರವರಿಯಲ್ಲಿ ಆಸ್ತಿ ತೆರಿಗೆ ಹೆಚ್ಚಿಸಲಾಗಿದ್ದು, ಇದೀಗ ಮತ್ತೊಮ್ಮೆ ಆಸ್ತಿ ತೆರಿಗೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರ ಶೀಘ್ರ ಆಸ್ತಿ ತೆರಿಗೆ ಹೆಚ್ಚಳ ಪ್ರಸ್ತಾಪವನ್ನು ಹಿಂಪಡೆಯಬೇಕು ಹಾಗೂ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ ಆಡಳಿತದಲ್ಲಿ ಜಾರಿಗೆ ತಂದ ಆಸ್ತಿ ತೆರಿಗೆಯ ಹೆಚ್ಚಳವನ್ನು ಹಿಂಪಡೆಯದಿದ್ದರೆ ಮನೆ-ಮನೆಗೆ ತೆರಳುವ ಆಂದೋಲನವನ್ನು ನಡೆಸಲಾಗುವುದು ಎಂದರು.

ನಗರ ಪಾಲಿಕೆ ಮಾಜಿ ಸದಸ್ಯ ಕೆ.ಜಿ. ಶಿವಕುಮಾರ್ ಮಾತನಾಡಿ, ಜಿಲ್ಲಾಧಿಕಾರಿಗಳು ನಗರ ಪಾಲಿಕೆ ಆಡಳಿತಾಧಿಕಾರಿಗಳಾಗಿದ್ದ ವೇಳೆ ಜನತೆಗೆ ದ್ರೋಹ ಬಗೆದಿದ್ದಾರೆ. ಈ ಕೂಡಲೇ ಜಿಲ್ಲಾಧಿಕಾರಿಗಳು ಜನತೆಯ ಕ್ಷಮೆ ಕೋರಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಸೋಮ್ಲಾಪುರದ ಹನುಮಂತಪ್ಪ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ ಮಾಲತೇಶ್ ಸೇರಿದಂತೆ ಇತರರು ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಜಿಲ್ಲಾ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಬಿ.ಜಿ. ನಾಗರಾಜ್, ನಗರ ಪಾಲಿಕೆ ಸದಸ್ಯರುಗಳಾದ ವಿನಾಯಕ, ಜಾಕೀರ್ ಅಲಿ, ಕಲ್ಲಳ್ಳಿ ನಾಗರಾಜ್, ಸುಷ್ಮಾ ಪಾಟೀಲ್, ರಹಮತ್ ದಾದಾಪೀರ್, ಡೋಲಿ ಚಂದ್ರು, ಗೋವಿಂದ ಹಾಲೇಕಲ್ಲು, ಕೆ.ಎಂ. ಮಂಜುನಾಥ್, ಶುಭಮಂಗಳ, ಮಂಗಳಮ್ಮ, ಉಮಾಕುಮಾರ್, ಆವರಗೆರೆ ಅಣ್ಣೇಶನಾಯ್ಕ, ವೆಂಕಟೇಶನಾಯ್ಕ, ಮುನಿಸ್ವಾಮಿ, ಅಲೆಕ್ಸಾಂಡರ್, ರವಿ, ಗೋಪಾಲ್, ರಾಕೇಶ್, ಅಬ್ದುಲ್ ಜಬ್ಬಾರ್, ಮೊಟ್ಟೆ ದಾದಾಪೀರ್, ಯುವರಾಜ್, ಕರಿಬಸಪ್ಪ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಶೌಚಾಲಯ ನಿರ್ಮಿಸದ ಅಧಿಕಾರಿಗಳಿಗೆ ಈಶ್ವರಪ್ಪ ತರಾಟೆ



ಬೆಂಗಳೂರು, ಜ. 8- ಹಳ್ಳಿಗಳಲ್ಲಿ ಮಹಿಳೆಯರು ಬಯಲಿನಲ್ಲಿ ಬಹಿರ್ದೆಸೆಗೆ ಹೋಗುತ್ತಿರುವುದು ತಪ್ಪಿಲ್ಲ. ಇದನ್ನು ತಡೆಯಲು ಏತಕ್ಕೆ ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳನ್ನು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತರಾಟೆಗೆ ತೆಗೆದುಕೊಂಡಿದ್ದಾರೆ.

ಇಲಾಖಾ ಅಧಿಕಾರಿಗಳ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿ ಆದ ನಂತರ ಪ್ರತಿ ಶೌಚಾಲಯ ನಿರ್ಮಾಣಕ್ಕೆ 14,500 ರೂಪಾಯಿ ನೀಡುತ್ತಿದೆ. ಹಣದ ಕೊರತೆಯಿಲ್ಲ ಇಷ್ಟಾದರೂ ಶೌಚಾಲಯ ನಿರ್ಮಿಸದೆ, ನಮ್ಮ ಮಹಿಳೆಯರು ಇನ್ನೂ ಬಯಲು ಬಹಿರ್ದೆಸೆಗೆ ಹೋಗುವಂತೆ ಮಾಡಿದ್ದೀರಿ, ನಿಮಗೆ ಕೆಲಸ ಮಾಡಲು ಏನಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ಪ್ರತಿ ಶೌಚಾಲಯ ನಿರ್ಮಾಣಕ್ಕೆ 4,330 ರೂ. ನೀಡುತ್ತಿತ್ತು, ಈಗಿನ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣ ನೀಡುತ್ತಿದೆ ಎಂದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 2,169 ಕೋಟಿ ರೂ. ಮೊತ್ತದಲ್ಲಿ ಕಾಮಗಾರಿ ಆರಂಭ ಮಾಡಲಾಗಿದೆ, ಎರಡು ಹಂತಕ್ಕೆ 1,271 ಕೋಟಿ ರೂ. ಅನುದಾನ ಈಗಾಗಲೇ ಬಂದಿದೆ. 5,427 ಕಿಲೋ ಮೀಟರ್‌ಗೆ 3,671 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಲು ತೀರ್ಮಾನಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಒಂದು ಕೋಟಿ 10 ಲಕ್ಷ ಮಾನವ ದಿನಗಳ ಅನುದಾನವನ್ನು ರಾಜ್ಯಕ್ಕೆ ಹೆಚ್ಚುವರಿಯಾಗಿ ಕೊಟ್ಟಿದೆ. ಇದು ಒಟ್ಟು 104 ತಾಲ್ಲೂಕಿಗೆ ಅನ್ವಯ ಆಗಲಿದೆ ಎಂದರು.

ಜಲ್ ಜೀವನ್ ಮಿಷನ್ ಅಡಿ ಪ್ರತಿ ಕುಟುಂಬಕ್ಕೆ ಕೊಳಾಯಿ ನೀರು ಪೂರೈಕೆ ಬಗ್ಗೆ ಎರಡು ದಿನಗಳ ಕಾರ್ಯಾಗಾರ ನಡೆಯುತ್ತಿದೆ, 23 ಲಕ್ಷ ಮನೆಗಳಿಗೆ ಈ ವರ್ಷ ಸಂಪರ್ಕ ಒದಗಿಸಲು ತೀರ್ಮಾನಿಸಲಾಗಿದೆ. 685 ಗ್ರಾಮಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಪ್ರಾರಂಭವಾಗಿದೆ, 2012ರಲ್ಲಿ ನಿರ್ಮಲ ಭಾರತ್ ಅಭಿಯಾನದಲ್ಲಿ 4 ಸಾವಿರ ರೂ. ಅನುದಾನವನ್ನು 12 ಸಾವಿರ ರೂ.ಗಳಿಗೆ ಏರಿಕೆ ಮಾಡಲಾಗಿದೆ.

ಎಲ್ಲಾ ಗ್ರಾಮ ಪಂಚಾಯತ್ ಕಟ್ಟಡಗಳಿಗೆ ಸೋಲಾರ್ ಲೈಟ್ ಅಳವಡಿಕೆಗೆ ತೀರ್ಮಾನಿಸಲಾಗಿದೆ, 6,273 ಗ್ರಾಮ ಪಂಚಾಯತ್‌ಗಳಲ್ಲಿ ಒಂದು ವರ್ಷದಲ್ಲಿ ಸೋಲಾರ್ ಲೈಟ್ ಹಾಕಲಾಗುವುದು ಎಂದರು.



## ನಡಿಗೆ ಜಾಥಾದಲ್ಲಿ ಮಹಿಳಾ ತಂಡ

ದಾವಣಗೆರೆ, ಜ.7- ನಗರದಿಂದ ಹರಿಹರದ ಶ್ರೀ ಹರಿಹರೇಶ್ವರ ದೇವಸ್ಥಾನದವರೆಗೂ ಕುಂದುವಾಡ ಕೆರೆ ವಾಯು ವಿಹಾರಿ ಬಳಗ ದವರು ಮೊನ್ನೆ ಹಮ್ಮಿಕೊಂಡಿದ್ದ ನಡಿಗೆ ಜಾಥಾದಲ್ಲಿ ಭಾಗವಹಿಸಿದ್ದ ಮಹಿಳಾ ತಂಡ.

# ಸಮವಸ್ತ್ರವೂ ಇಲ್ಲದ ಅರಣ್ಯ ಭದ್ರತಾ ಸಿಬ್ಬಂದಿ

## ಶಸ್ತ್ರ, ಕವಚ ಒದಗಿಸುವ ಬಗ್ಗೆ ಸುಪ್ರೀಂ ಕೋರ್ಟ್ ಪರಿಶೀಲನೆ

ನವದೆಹಲಿ, ಜ. 8 – ಕರ್ನಾಟಕದ ಅರಣ್ಯ ಇಲಾಖೆ ಸಿಬ್ಬಂದಿ ಚಪ್ಪಲಿಯಲ್ಲಿ ತಿರುಗಾಡುತ್ತಿದ್ದರೆ, ಮಹಾರಾಷ್ಟ್ರದ ಸಿಬ್ಬಂದಿ ಲಾಠಿಗಳನ್ನು ಹಿಡಿದು ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕಿದೆ ಎಂದು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಪರಿಸ್ಥಿತಿ ಹೀಗಿರುವಾಗ ಅವರು ಶಸ್ತ್ರಗಳನ್ನು ಹೊಂದಿರುವ ಕಾಡುಗಳ್ಳರಿಂದ ಪರಿಸರವನ್ನು ಹೇಗೆ ರಕ್ಷಿಸಬಲ್ಲರು ಎಂದು ಪ್ರಶ್ನಿಸಿದೆ.

ಅಸ್ಸಾಂನ ಅರಣ್ಯ ಸಿಬ್ಬಂದಿ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿದ್ದಾರೆ. ಉಳಿದ ರಾಜ್ಯಗಳ ಸಿಬ್ಬಂದಿಗೆ ಸಮರ್ಪಕ ಸಮವಸ್ತ್ರವೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿರ್ದಿಷ್ಟ ದರ್ಜೆಗಿಂತ ಮೇಲಿನ ಸಿಬ್ಬಂದಿಗೆ ಶಸ್ತ್ರ, ಗುಂಡು ನಿರೋಧಕ ಕವಚ ಹಾಗೂ ಹೆಲ್ಮೆಟ್ ಒದಗಿಸುವಂತೆ ತಾನು ಆದೇಶ ಹೊರಡಿಸಬೇಕಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ಈ ಟಿಪ್ಪಣಿ ಮಾಡಿದ್ದು, ಭದ್ರತಾ ಸಿಬ್ಬಂದಿಗೆ ಸೂಕ್ತ ಉಪಕರಣಗಳನ್ನು ನೀಡುವ ಕುರಿತು ತನಗೆ ಜಂಟಿಯಾಗಿ ಉತ್ತರ ಸಲ್ಲಿಸಬೇಕೆಂದು ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾ ಹಾಗೂ ಅಮಿಕಸ್ ಕ್ಯೂರಿ ಎ.ಡಿ.ಎನ್. ರಾವ್ ಹಾಗೂ ಹಿರಿಯ ವಕೀಲ ಶ್ಯಾಮ್ ದಿವಾನ್ ಅವರಿಗೆ ತಿಳಿಸಿದೆ. ಮೆಹ್ತಾ ಅವರು ಪರಿಸರ ಹಾಗೂ ಅರಣ್ಯ ಇಲಾಖೆಯ ಪರವಾಗಿ ಹಾಜರಿದ್ದರೆ, ಸರ್ಕಾರೇತರ ಸಂಘಟನೆಯ ಪರವಾಗಿ ದಿವಾನ್ ವಾದ ಮಂಡಿಸಿದ್ದರು.

ಈ ಪರಿಸ್ಥಿತಿ ಗಂಭೀರವಾಗಿದೆ. ಅರಣ್ಯ ಸಿಬ್ಬಂದಿ ಪರಿಸರವನ್ನು ಹೇಗೆ ರಕ್ಷಿಸಬಲ್ಲರು ? ಎಂಬ ಪ್ರಶ್ನೆ ಇದೆ. ವಿಶಾಲವಾಗಿ ಹರಡಿರುವ ಅರಣ್ಯ ಪ್ರದೇಶ ನಿರ್ಜನವಾಗಿರುತ್ತದೆ. ಕಾಡುಗಳ್ಳರು ಇದರ ದುರ್ಲಾಭ ಪಡೆಯುತ್ತಿದ್ದಾರೆ ಎಂದು ನ್ಯಾಯಾಲಯ ತಿಳಿಸಿದೆ.

ಅರಣ್ಯಾಧಿಕಾರಿಗಳು ನಗರಗಳಲ್ಲಿರುವ ಪೊಲೀಸರ ರೀತಿ ಸಂಕಷ್ಟ ಎದುರಾದಾಗ ಕರೆ ಮಾಡುವ ಪರಿಸ್ಥಿತಿಯಲ್ಲೂ ಇರುವುದಿಲ್ಲ. ಇದಕ್ಕೆಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಬೇಕಿದೆ ಎಂದೂ ನ್ಯಾಯಾಲಯ ಹೇಳಿದೆ.

# ನಗರದ ಶ್ರೀ ಮಾರುತಿ ಮಂದಿರದಲ್ಲಿ ಇಂದು ಕಾರ್ತಿಕ



ಸವಿತಾ ಸಮಾಜ ಸಂಘದ ವತಿಯಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ರಾತ್ರಿ 8 ಘಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಸವಿತಾ ಸಮಾಜದ ಅಧ್ಯಕ್ಷ ಎನ್. ರಂಗಸ್ವಾಮಿ ತಿಳಿಸಿದ್ದಾರೆ.


JANATHA VIDYALAYA ENGLISH MEDIUM SCHOOL
Hondada Road, Davangere.
ಶಿಕ್ಷಕರು ಬೇಕಾಗಿದ್ದಾರೆ

| ವಿಷಯ | ತರಗತಿ | ಶಿಕ್ಷಕರ ಸಂಖ್ಯೆ |
| --- | --- | --- |
| ಕನ್ನಡ | ಪ್ರೌಢಶಾಲೆ | 1 |
| ಇಂಗ್ಲೀಷ್ | ಪ್ರೌಢಶಾಲೆ | 1 |
| ಸಮಾಜ ವಿಜ್ಞಾನ | ಪ್ರೌಢಶಾಲೆ | 1 |

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
98446 64231, 08192 232341, 96207 17196



ಎಂಟನೇ ವರ್ಷದ ಪುಣ್ಯಸ್ಮರಣೆ



ದಿ. ಗಾಯತ್ರಿ ಬಸವರಾಜ್

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ನೀವು ನಮ್ಮಿಂದ ದೂರವಾದರೂ ನೀವು ಹಾಕಿಕೊಟ್ಟ ಮಾರ್ಗದರ್ಶನ ಕುಟುಂಬ ವರ್ಗಕ್ಕೆ ಆದರ್ಶವಾಗಿದೆ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ.
ನೀವು ತೋರಿಸಿಕೊಟ್ಟ ಸನ್ಮಾರ್ಗದಲ್ಲೇ ಸದಾ ಮುನ್ನಡೆಯುತ್ತಿರುವ,
ದುಃಖತಪ್ತ ಕುಟುಂಬ ವರ್ಗ

ಪತಿ : ಐ. ಬಸವರಾಜಪ್ಪ,
ವರ್ತಕರು ಹಾಗೂ ಮಾಜಿ ಅಧ್ಯಕ್ಷರು, ಕನಕ ಕೋ-ಆಪರೇಟಿವ್ ಬ್ಯಾಂಕ್, ದಾವಣಗೆರೆ.
ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ.



ನಾಲ್ಕನೇ ವರ್ಷದ ಪುಣ್ಯ ಸ್ಮರಣೆ



ನಿಧನ : 09.01.2017

ಹುಲ್ಲುಮನೆ ಯಲ್ಲಪ್ಪರ ಶ್ರೀಮತಿ ಹನುಮಮ್ಮ

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು
ನಿಮ್ಮ ಆದರ್ಶಗಳು ನಮಗೆ ದಾರಿದೀಪ ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಶ್ರೀ ಹುಲ್ಲುಮನೆ ಯಲ್ಲಪ್ಪರ ಹನುಮಂತಪ್ಪ ಮತ್ತು ಮಕ್ಕಳು
ಶ್ರೀ ಹುಲ್ಲುಮನೆ ಯಲ್ಲಪ್ಪರ ರಾಮಚಂದ್ರಪ್ಪ ಮತ್ತು ಮಕ್ಕಳು
ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು
ಹುಲ್ಲುಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು
ನಿಟುವಳ್ಳಿ, ದಾವಣಗೆರೆ, ಫೋನ್ : 97385 81459, 90089 69070


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte